# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 372 (378) |
| ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ (ಪದವೀಧರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10.03.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಶಾಲಾ ಶಿಕ್ಷಣ ಸಾಕ್ಷರತಾ ಇಲಾಖೆಯಲ್ಲಿ ಬೋಧಕ ವೃಂದದ ಹುದ್ದೆಗಳ ಅನುಪಾತಕ್ಕೆ ತಕ್ಕಂತೆ ಬೋಧಕೇತರ ವೃಂದದ ಹುದ್ದೆಗಳು ಮಂಜೂರಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಮಂಜೂರಾಗಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು; (ವೃಂದ ಹಾಗೂ ಹುದ್ದೆವಾರು ಮತ್ತು ಆಯುಕ್ತಾಲಯವಾರು ಮಾಹಿತಿ ನೀಡುವುದು)</td><td>ಹೌದು.<br>ಶಾಲಾ ಶಿಕ್ಷಣ ಇಲಾಖೆಯಲ್ಲಿ ಮಂಜೂರಾಗಿರುವ ಒಟ್ಟು ಬೋಧಕ ಮತ್ತು ಬೋಧಕೇತರ ಹುದ್ದೆಗಳ ಸಂಖ್ಯೆ ಹಾಗೂ ವೃಂದವಾರು ವಿವರ ಈ ಕೆಳಕಂಡಂತಿದೆ.
<table>
<tr><th rowspan="2">ಕ್ರ. ಸಂ</th><th rowspan="2">ವೃಂದ</th><th colspan="2">ಬೋಧಕ</th><th rowspan="2">ಬೋಧಕೇತರ</th><th rowspan="2">ಒಟ್ಟು</th></tr>
<tr><th>ಪ್ರಾಥಮಿಕ</th><th>ಪ್ರೌಢ</th></tr>
<tr><td>1</td><td>ಎ</td><td>-</td><td>-</td><td>893</td><td>893</td></tr>
<tr><td>2</td><td>ಬಿ</td><td>-</td><td>5809</td><td>274</td><td>6083</td></tr>
<tr><td>3</td><td>ಸಿ</td><td>198902</td><td>36804</td><td>8384</td><td>244090</td></tr>
<tr><td>4</td><td>ಡಿ</td><td>-</td><td>-</td><td>7329</td><td>7329</td></tr>
<tr><td></td><td>ಒಟ್ಟು</td><td>198902</td><td>42613</td><td>16880</td><td>258395</td></tr>
</table></td></tr>
<tr><td>ಆ)</td><td>ಬೋಧಕ ಹುದ್ದೆಗಳನ್ನು ಮಂಜೂರು ಮಾಡಲು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು; (ಮಾಹಿತಿ ನೀಡುವುದು)</td><td>ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ:ಸಿ4(1)ಸಪ್ರೌಶಾ.ಹೆ.ಶಿ-47/2021-22, ದಿನಾಂಕ:04.09.2023ರನ್ವಯ ಪ್ರಾಥಮಿಕ ಶಾಲೆಗೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಈ ಕೆಳಕಂಡಂತೆ ಬೋಧಕ ಹುದ್ದೆಗಳನ್ನು ಮಂಜೂರು ಮಾಡಲು ಮಾನದಂಡಗಳನ್ನು ನಿಗದಿಪಡಿಸಲಾಗಿದೆ.
<table>
<tr><th>ವಿದ್ಯಾರ್ಥಿಗಳ ಸಂಖ್ಯೆ</th><th>ಶಿಕ್ಷಕರ ಸಂಖ್ಯೆ</th></tr>
<tr><td>01 ರಿಂದ 11</td><td>1</td></tr>
<tr><td>12 ರಿಂದ 60</td><td>2</td></tr>
<tr><td>61 ರಿಂದ 90</td><td>3</td></tr>
<tr><td>91 ರಿಂದ 120</td><td>4</td></tr>
<tr><td>121 ರಿಂದ 200</td><td>6</td></tr>
<tr><td>201 ರಿಂದ 240</td><td>7</td></tr>
<tr><td>241 ರಿಂದ ಮೇಲ್ಪಟ್ಟು</td><td>1:40ರ ಅನುಪಾತದಂತೆ, ಹುದ್ದೆಗಳನ್ನು ಮಂಜೂರು ಮಾಡಲಾಗುವುದು.</td></tr>
</table>
ಪ್ರೌಢ ಶಾಲೆಗೆ ಸಂಬಂಧಿಸಿದಂತೆ 70 ವಿದ್ಯಾರ್ಥಿಗಳಿಗೆ ಒಂದು ವಿಭಾಗದಂತೆ, ಪ್ರತಿ ವಿಭಾಗಕ್ಕೆ 7 ಹುದ್ದೆಗಳನ್ನು ಮಂಜೂರು ಮಾಡಲಾಗುವುದು.</td></tr>
<tr><td>ಇ)</td><td>ಹಾಗಿದ್ದಲ್ಲಿ; ವಿದ್ಯಾರ್ಥಿಗಳ ಸಂಖ್ಯೆಗನು ಗುಣವಾಗಿ ಬೋಧಕ ಹುದ್ದೆಗಳನ್ನು ಮಂಜೂರು ಮಾಡುವ ಮಾದರಿ ಯಲ್ಲಿಯೇ, ವಿದ್ಯಾರ್ಥಿಗಳ ಸಂಖ್ಯೆಗನು</td><td>ಪ್ರೌಢಶಾಲೆಗೆ ಸಂಬಂಧಿಸಿದಂತೆ, ಸರ್ಕಾರದ ಪತ್ರ ಸಂಖ್ಯೆ:ಇಡಿ 83 ಎಲ್ಐಬಿ 2018, ದಿನಾಂಕ:02.09.2021 ರಂತೆ ಬೋಧಕೇತರ ವೃಂದದ ಹುದ್ದೆಗಳನ್ನು ಮರು ಹಂಚಿಕೆ ಮಾಡುವ ಮುಖಾಂತರ ಈ ಕೆಳಕಂಡಂತೆ, ಕ್ರಮವಹಿಸಲಾಗುತ್ತಿದೆ.</td></tr>
</table>

| | | |
|---|---|---|
| | ಗುಣವಾಗಿ ಮತ್ತು ಬೋಧಕ ಹುದ್ದೆಗಳಿಗನುಗುಣವಾಗಿ ಬೋಧಕೇತರ ಹುದ್ದೆಗಳನ್ನು ಶಾಲೆಗಳಿಗೆ ಮತ್ತು ಕಛೇರಿಗಳಿಗೆ ಮಂಜೂರು ಮಾಡುವ ಕುರಿತು ಸರ್ಕಾರಕ್ಕಿರುವ ತೊಂದರೆಗಳೇನು; ಬೋಧಕೇತರ ವೃಂದದ ಎಲ್ಲಾ ಮಂಜೂರಾತಿ ಆದೇಶದ ಪ್ರತಿಗಳನ್ನು ನೀಡುವುದು; | 1. ಪ್ರತಿ ಸರ್ಕಾರಿ ಶಾಲೆಗಳಲ್ಲಿ ಕನಿಷ್ಟ ಒಂದು ಪ್ರಥಮ ದರ್ಜೆ ಸಹಾಯಕರ ಅಥವಾ ದ್ವಿತೀಯ ದರ್ಜೆ ಸಹಾಯಕರ ಹುದ್ದೆ ನೀಡುವುದು.<br>2. ವಿದ್ಯಾರ್ಥಿಗಳ ದಾಖಲಾತಿ 210 ರ ವರೆಗೆ ಇದ್ದಲ್ಲಿ ಒಂದು ದ್ವಿತೀಯ ದರ್ಜೆ ಸಹಾಯಕರ ಹುದ್ದೆ ನೀಡುವುದು.<br>3. ವಿದ್ಯಾರ್ಥಿಗಳ ದಾಖಲಾತಿ 210 ರಿಂದ 420 ರವರೆಗೆ ಇದ್ದಲ್ಲಿ ಒಂದು ಪ್ರಥಮ ದರ್ಜೆ ಸಹಾಯಕರು ಹಾಗೂ ಮತ್ತೊಂದು ದ್ವಿತೀಯ ದರ್ಜೆ ಸಹಾಯಕರ ಹುದ್ದೆ ನೀಡುವುದು.<br>4. ವಿದ್ಯಾರ್ಥಿಗಳ ದಾಖಲಾತಿ 421 ಕ್ಕೂ ಹೆಚ್ಚಿದ್ದಲ್ಲಿ ಎರಡು ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ನೀಡುವುದು.<br><br>ಶಾಲಾ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕಛೇರಿಗಳಿಗೆ ನಿಗದಿಪಡಿಸಲಾಗಿರುವ ಸಿಬ್ಬಂದಿ ಮಾದರಿಯನ್ವಯ ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡಲಾಗಿರುತ್ತದೆ.<br><br>ಆದೇಶದ ಪ್ರತಿಗಳನ್ನು ಲಗತ್ತಿಸಿದೆ. |
| ಈ) | ನೂತನವಾಗಿ ಪ್ರಾರಂಭಿಸಿದ ಕೆ.ಪಿ.ಎಸ್. ಶಾಲೆಗಳಿಗೆ ಬೋಧಕ ಹುದ್ದೆಗಳನ್ನು ಮಂಜೂರು ಮಾಡಿದಂತೆಯೇ, ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆಯೇ; ಮಾಡದೇ ಇಲ್ಲದಿದ್ದಲ್ಲಿ ಕಾರಣಗಳೇನು; ಮಾಡಿದ್ದಲ್ಲಿ ಆದೇಶದ ಪ್ರತಿಗಳನ್ನು ನೀಡುವುದು; | ಹೋಬಳಿ ಮಟ್ಟದಲ್ಲಿದ್ದ ಸರ್ಕಾರಿ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಸಂಯುಕ್ತಗೊಳಿಸಿ ಕೆ.ಪಿ.ಎಸ್ ಶಾಲೆಗಳನ್ನಾಗಿ ಪರಿವರ್ತಿಸಲಾಗಿದೆ. ಮೂಲತಃ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಈಗಾಗಲೇ ಬೋಧಕೇತರ ಹುದ್ದೆಗಳು ಮಂಜೂರಾಗಿರುತ್ತವೆ. ಕೊರತೆ ಇರುವ ಹುದ್ದೆಗಳನ್ನು ಆದ್ಯತೆ ಮೇರೆಗೆ ಹೆಚ್ಚುವರಿ ಹುದ್ದೆಗಳಿರುವ ಇತರೆ ಶಾಲೆಗಳಿಂದ ಮರು ಹೊಂದಾಣಿಕೆ ಮಾಡುವ ಮುಖಾಂತರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. |
| ಉ) | ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಮತ್ತು ಬೋಧಕ ಹುದ್ದೆಗಳಿಗನುಗುಣವಾಗಿ ಶಾಲೆಗಳಿಗೆ ಮತ್ತು ವಿವಿಧ ಹಂತದ ಕಛೇರಿಗಳಿಗೆ ಹಾಗೂ ನೂತನವಾಗಿ ಪ್ರಾರಂಭಿಸಿರುವ ಕೆ.ಪಿ.ಎಸ್. ಶಾಲೆಗಳಿಗೆ ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡುವ ಕುರಿತು ಸರ್ಕಾರದ ನಿಲುವೇನು? (ಮಾಹಿತಿ ನೀಡುವುದು) | |

ಸಂಖ್ಯೆ:ಇಪಿ 111 ಎಸ್ ಟಿಬಿ 2025

**( ಎಸ್. ಮಧು ಬಂಗಾರಪ್ಪ )**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಉತ್ತರ ಕರ್ನಾಟಕದ ಶೈಕ್ಷಣಿಕವಾಗಿ ಹಿಂದುಳಿದ 7 ಜಿಲ್ಲೆಗಳನ್ನು ಅಭಿವೃದ್ಧಿ ಪಡಿಸಲು ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ರಾಜ್ಯ ಯೋಜನಾ ನಿರ್ದೇಶಕರ ಕಛೇರಿಯಲ್ಲಿರುವ ನಿರ್ದೇಶಕರು (ಕಾರ್ಯಕ್ರಮಗಳು) ಈ ಹುದ್ದೆಯನ್ನು ಗುಲ್ಬರ್ಗಾ ಕೇಂದ್ರ ಸ್ಥಾನಕ್ಕೆ ಸ್ಥಳಾಂತರ ಮಾಡುವ ಬಗ್ಗೆ

ಓದಲಾಗಿದೆ: ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಪ್ರಸ್ತಾವನೆ ಸಂಖ್ಯೆ: ಶಿ1(1) ಇತರ 8:2001-2002 ದಿನಾಂಕ: 7.6.2001.

ಪ್ರಸ್ತಾವನೆ:

ದಿನಾಂಕ 3.6.2001 ಮತ್ತು 4.6.2001ರಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಇಲಾಖಾ ಅಧಿಕಾರಿಗಳೊಂದಿಗೆ ಉತ್ತರ ಕರ್ನಾಟಕದ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ವಿಜಾಪೂರ, ಬಳ್ಳಾರಿ ಹಾಗೂ ಬಾಗಲಕೋಟೆ ಈ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಈ 7 ಜಿಲ್ಲೆಗಳು ಶೈಕ್ಷಣಿಕವಾಗಿ ಬಹಳ ಹಿಂದುಳಿದಿರುವುದನ್ನು ಮನಗಂಡಿರುತ್ತಾರೆ. ಈ ಬಗ್ಗೆ ಮಾನ್ಯ ಸಚಿವರು ದಿನಾಂಕ 3.6.2001ರಂದು ಮತ್ತು 4.6.2001ರಂದು ರಾಯಚೂರು ಮತ್ತು ಗುಲ್ಬರ್ಗಾ ನಗರಗಳಲ್ಲಿ ನಡೆಸಿದ ಆಯಾಯ ಪ್ರದೇಶದ ಸಚಿವರು, ಸಂಸತ್ ಸದಸ್ಯರು, ಶಾಸಕರು, ಜಿಲ್ಲಾ ಪಂಚಾಯತ್ ಅಧ್ಯಕ್ಷರು ಮತ್ತು ಶಿಕ್ಷಣ ಸಮಿತಿ ಸದಸ್ಯರು ಹಾಗೂ ಅಧ್ಯಕ್ಷರು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಇತರ ಜನಪ್ರತಿನಿಧಿಗಳನ್ನು ಒಳಗೊಂಡ ಉನ್ನತ ಮಟ್ಟದ ಸಮಾವೇಶದಲ್ಲಿ ಈ 7 ಜಿಲ್ಲೆಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸುವ ದಿಸೆಯಲ್ಲಿ ಶಿಕ್ಷಣ ಇಲಾಖೆ ಹಮ್ಮಿಕೊಂಡಿರುವ ಹಲವಾರು ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಉಸ್ತುವಾರಿಗಾಗಿ ಗುಲ್ಬರ್ಗಾ ಕೇಂದ್ರ ಸ್ಥಾನದಲ್ಲಿ ಒಂದು ನಿರ್ದೇಶನಾಲಯವನ್ನು ಸ್ಥಾಪಿಸುವುದಾಗಿ ನಿರ್ಣಯ ಕೈಗೊಂಡಿರುತ್ತಾರೆ. ಅದರಂತೆ ಓದಲಾದ ಪತ್ರದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖಾ ಆಯುಕ್ತರು ಪ್ರಸ್ತಾವನೆಯನ್ನು ಸಲ್ಲಿಸಿ ಕೆಳಕಂಡ ಅಂಶಗಳ ಬಗ್ಗೆ ಸರ್ಕಾರದ ಆದೇಶವನ್ನು ಕೋರಿರುತ್ತಾರೆ.

1. ಜನಶಾಲಾ ಶಿಕ್ಷಣ ಕಾರ್ಯಕ್ರಮದ ನಿರ್ದೇಶನಾಲಯ ಮತ್ತು ಕಛೇರಿಯನ್ನು ಸಿಬ್ಬಂದಿ ಸಹಿತ ತಕ್ಷಣದಿಂದ ಜಾರಿಗೆ ಬರುವಂತೆ ಡಿ.ಪಿ.ಇ.ಪಿ. ಯೋಜನೆಯ ಜೊತೆಗೆ ವಿಲೀನಗೊಳಿಸಿ, ಇನ್ನು ಮುಂದೆ ಜನಶಾಲಾ ಶಿಕ್ಷಣ ಕಾರ್ಯಕ್ರಮದ ನಿರ್ದೇಶಕರು ಡಿ.ಪಿ.ಇ.ಪಿ. ರಾಜ್ಯ ಯೋಜನಾ ನಿರ್ದೇಶಕರ ಅಧೀನದಲ್ಲಿ ಕಾರ್ಯನಿರ್ವಹಿಸುವಂತೆ ಆದೇಶಿಸುವುದು.
2. ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ರಾಜ್ಯ ಯೋಜನಾ ನಿರ್ದೇಶಕರ ಕಛೇರಿಯಲ್ಲಿರುವ ನಿರ್ದೇಶಕರು (ಕಾರ್ಯಕ್ರಮಗಳು) ಈ ಹುದ್ದೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಗುಲ್ಬರ್ಗಾ ಕೇಂದ್ರ ಸ್ಥಾನಕ್ಕೆ ಸ್ಥಳಾಂತರಿಸುವುದು.
3. ಡಿ.ಪಿ.ಇ.ಪಿ. ರಾಜ್ಯ ಯೋಜನಾ ಕಛೇರಿಯಲ್ಲಿ ಖಾಲಿಯಿರುವ ಎರಡು ಗ್ರೂಫ್-ಬಿ ಬೋಧಕ ವೃಂದದ ಹುದ್ದೆಗಳನ್ನು ಗುಲ್ಬರ್ಗಾ ಕಛೇರಿಗೆ ಸ್ಥಳಾಂತರಿಸುವುದು.

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 285 ಡಿಪಿಎ 2001 ಬೆಂಗಳೂರು, ದಿನಾಂಕ: 16.6.2001**

ಉತ್ತರ ಕರ್ನಾಟಕದ ಶೈಕ್ಷಣಿಕವಾಗಿ ಹಿಂದುಳಿದಿರುವ ಭಾಗಗಳಾದ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ವಿಜಾಪೂರ, ಬಳ್ಳಾರಿ ಹಾಗೂ ಬಾಗಲಕೋಟೆ ಜಿಲ್ಲೆಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಲು ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ (ಡಿಪಿಇಪಿ) ಯ ರಾಜ್ಯ ಯೋಜನಾ ನಿರ್ದೇಶಕರ ಕಛೇರಿಯಲ್ಲಿರುವ ನಿರ್ದೇಶಕರು (ಕಾರ್ಯಕ್ರಮ) ಮತ್ತು ಇದೇ ಕಛೇರಿಯಲ್ಲಿ ಖಾಲಿ ಇರುವ ಎರಡು ಗ್ರೂಪ್-ಬಿ ಬೋಧಕ ವೃಂದದ ಹುದ್ದೆಗಳನ್ನು ಗುಲ್ಬರ್ಗಾಕ್ಕೆ ಸ್ಥಳಾಂತರಿಸಲಾಗಿದೆ.

2. ಮೇಲಿನಂತೆ ಸ್ಥಳಾಂತರಿಸಿದ ನಂತರವೂ ನಿರ್ದೇಶಕರು (ಕಾರ್ಯಕ್ರಮಗಳು) ಮತ್ತು ಅಧಿಕಾರಿಗಳ ವೇತನ ಮತ್ತಿತರ ವೆಚ್ಚಗಳನ್ನು ಡಿ.ಪಿ.ಇ.ಪಿ. ಯೋಜನೆಯ ವತಿಯಿಂದ ಭರಿಸತಕ್ಕದ್ದು.

3. ಗುಲ್ಬರ್ಗಾವನ್ನು ಕೇಂದ್ರ ಸ್ಥಾನವಾಗಿ ಹೊಂದಿರುವ ನಿರ್ದೇಶಕರು (ಕಾರ್ಯಕ್ರಮಗಳು) ಇವರು ಸಾರ್ವಜನಿಕ ಶಿಕ್ಷಣ ಇಲಾಖಾ ಆಯುಕ್ತರು ಮತ್ತು ಡಿ.ಪಿ.ಇ.ಪಿ. ರಾಜ್ಯ ಯೋಜನಾ ನಿರ್ದೇಶಕರು ಇವರ ಅಧೀನ ಮತ್ತು ನಿಯಂತ್ರಣದಲ್ಲಿ ಮೇಲೆ ತಿಳಿಸಿರುವ ಜಿಲ್ಲೆಗಳಲ್ಲಿನ ಡಿ.ಪಿ.ಇ.ಪಿ. ಕಾರ್ಯಕ್ರಮಗಳು ಮತ್ತು ಶಿಕ್ಷಣ ಇಲಾಖೆಯ ವಿಶೇಷ ಕಾರ್ಯಕ್ರಮಗಳ ಅನುಷ್ಠಾನದ ಉಸ್ತುವಾರಿಯನ್ನು ಮಾಡತಕ್ಕದ್ದು.

4. ಸದರಿ ನಿರ್ದೇಶಕರು (ಕಾರ್ಯಕ್ರಮಗಳು) ಇವರ ಕಾರ್ಯಾಲಯವು ಗುಲ್ಬರ್ಗಾದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನಾ ಕಛೇರಿಯಲ್ಲಿ ಕಾರ್ಯ ನಿರ್ವಹಿಸತಕ್ಕದ್ದು. ಅಗತ್ಯ ಪೂರಕ ಸಿಬ್ಬಂದಿ, ಪೀಠೋಪಕರಣಗಳು ಇತ್ಯಾದಿ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖಾ ಆಯುಕ್ತರು ಮರು ಹೊಂದಾಣಿಕೆ ಮೂಲಕ ಸೂಕ್ತ ವ್ಯವಸ್ಥೆಯನ್ನು ಮಾಡತಕ್ಕದ್ದು. ಈ ಬಗ್ಗೆ ನಿರ್ದೇಶಕರು ಕಾರ್ಯಕ್ರಮಗಳು ಇವರು ಸೂಕ್ತ ಪ್ರಸ್ತಾವನೆಯನ್ನು ಆಯುಕ್ತರಿಗೆ ಕಳುಹಿಸತಕ್ಕದ್ದು.

5. ಮೇಲಿನಂತೆ ರಾಜ್ಯ ಯೋಜನಾ ಇಲಾಖಾ ನಿರ್ದೇಶಕರ ಕಛೇರಿಯಿಂದ ನಿರ್ದೇಶಕರು (ಕಾರ್ಯಕ್ರಮಗಳು) ಈ ಹುದ್ದೆಯನ್ನು ಗುಲ್ಬರ್ಗಾಕ್ಕೆ ಸ್ಥಳಾಂತರ ಮಾಡಿ 7 ಜಿಲ್ಲೆಗಳ ಡಿ.ಪಿ.ಇ.ಪಿ. ಮತ್ತಿತರ ಕೆಲಸಗಳನ್ನು ಹಂಚಿಕೆ ಮಾಡಿದ ನಂತರ ಉಳಿದ ಡಿ.ಪಿ.ಇ.ಪಿ. ಜಿಲ್ಲೆಗಳಲ್ಲಿನ ಡಿ.ಪಿ.ಇ.ಪಿ. ಕಾರ್ಯಕ್ರಮಗಳ ಅನುಷ್ಠಾನದ ಉಸ್ತುವಾರಿ ಜವಾಬ್ದಾರಿಯನ್ನು ಜನಶಾಲಾ ಶಿಕ್ಷಣ ಕಾರ್ಯಕ್ರಮದ ರಾಜ್ಯ ಯೋಜನಾ ನಿರ್ದೇಶಕರಿಗೆ ಅವರ ಕಾರ್ಯಭಾರದ ಜೊತೆಗೆ ವಹಿಸಲಾಗಿದೆ. ಜನಶಾಲಾ ಶಿಕ್ಷಣ ಕಾರ್ಯಕ್ರಮದ ರಾಜ್ಯ ಯೋಜನಾ ನಿರ್ದೇಶಕರು ಹಾಗೂ ಅವರ ಕಛೇರಿಯ ಸಿಬ್ಬಂದಿಯು ಈ ಹೆಚ್ಚುವರಿ ಕಾರ್ಯಭಾರಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಶಿಕ್ಷಣ ಯೋಜನೆಯ ರಾಜ್ಯ ಯೋಜನಾ ನಿರ್ದೇಶಕರ ಅಧೀನದಲ್ಲಿ ಕಾರ್ಯನಿರ್ವಹಿಸುವಂತೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ಇವರಿಗೆ
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು - ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸುವಂತೆ ಕೋರಿದೆ.

ಪ್ರತಿಗಳು
1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ರಾಜ್ಯ ಯೋಜನಾ ನಿರ್ದೇಶಕರು, ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ (ಡಿ.ಪಿ.ಇ.ಪಿ), ಬೆಂಗಳೂರು.
4. ನಿರ್ದೇಶಕರು (ಕಾರ್ಯಕ್ರಮಗಳು), ಡಿ.ಪಿ.ಇ.ಪಿ. / ನಿರ್ದೇಶಕರು, ಜನಶಾಲಾ ಶಿಕ್ಷಣ ಕಾರ್ಯಕ್ರಮ
5. ಜಿಲ್ಲಾಧಿಕಾರಿಗಳು, ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆ
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆ
7. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳು
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹ ನಿರ್ದೇಶಕರುಗಳು
9. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು
10. ಸಂಬಂಧಿಸಿದ / ಜಿಲ್ಲೆಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
11. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು
12. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕಾರ್ಯದರ್ಶಿಗಳ ಆಪ್ತ ಸಹಾಯಕರಿಗೆ
13. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ:ಇಡಿ 212 ಯೋಯೋಕ 2004,ದಿ:06-11-2004ರನ್ವಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗ ಅವರುಗಳ ವ್ಯಾಪ್ತಿಗೆ ವರ್ಗಾಯಿಸ ಬೇಕಾದ ಹುದ್ದೆಗಳು

| ಕ್ರ. ಸಂ | ಹುದ್ದೆಯ ಹೆಸರು | ಸರ್ಕಾರದ ದಿ:10-11-2003ರಲ್ಲಿ ಸ್ಥಳಾಂತರಿಸಲು ಆದೇಶಿಸಲಾದ ಹುದ್ದೆಗಳ ಸಂಖ್ಯೆ | | | ಸರ್ಕಾರದ ದಿನಾಂಕ:06-11-2004ರ ಆದೇಶದನ್ವಯ ಸ್ಥಳಾಂತರಿಸಬೇಕಾದ ಹುದ್ದೆಗಳ ಸಂಖ್ಯೆ | | | |
|---|---|---|---|---|---|---|---|---|
| | | ಧಾರವಾಡ | ಗುಲ್ಬರ್ಗ | ಒಟ್ಟು | ಧಾರವಾಡ | ಗುಲ್ಬರ್ಗ | ಒಟ್ಟು | |
| 1 | ಹಿರಿಯ ಸಹಾಯಕ ನಿರ್ದೇಶಕರು | 02 | 02 | 04 | 02 | 0 | 02 | -2 |
| 2 | ಸಹಾಯಕ ನಿರ್ದೇಶಕರು | 03 | 02 | 05 | 02 | 01 | 03 | -1 |
| 3 | ಅಧೀಕ್ಷರು,(ಲೆಕ್ಕ ಪತ್ರ ಅಧೀಕ್ಷಕರು,ಸಹಾಯಕ ಸಾಂಖ್ಯಿಕ ಸೇರಿದಂತೆ) | 14 | 6 | 20 | 08 | 02 | 10 | -4 |
| 4 | ಪ್ರ.ದ.ಸ (ಶೀಘ್ರಲಿಪಿಗಾರರು ಸೇರಿದಂತೆ) | 31 | 15 | 46 | 34 | 12 | 46 | -3 |
| 5 | ದ್ವಿ.ದ.ಸ/ ಬೆರಳಚ್ಚುಗಾರರು | 24 | 11 | 35 | 25 | 10 | 35 | -1 |
| 6 | ದ್ವಿ.ದ.ಸ.ಸಹಿತ ಬೆರಳಚ್ಚುಗಾರರು | 02 | 02 | 04 | 0 | 0 | 0 | -2 |
| 7 | "ಡಿ" ಗ್ರೂಪ್ / ದಲಾಯತ್ | 10 | 08 | 18 | 10 | 08 | 18 | - |
| 8 | ವಾಹನ ಚಾಲಕರು | 03 | 02 | 05 | 0 | 0 | 0 | -2 |
| | ಒಟ್ಟು | 89 | 48 | 137 | 81 | 33 | 114 | -15 |

(ಕೆ.ಶ್ರೀಕಂಠೇಶ್ವರ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ (ಯೋಜನೆ),
ಶಿಕ್ಷಣ ಇಲಾಖೆ.

35 - NEV
55 - ACPT

| |
|---|
| 90 |
| 15 |

SO PLG-B

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಉತ್ತರ ಕರ್ನಾಟಕದ ಧಾರವಾಡ ಮತ್ತು ಗುಲ್ಬರ್ಗಾಗಳಲ್ಲಿರುವ ಸಾರ್ವಜನಿಕ ಶಿಕ್ಷಣ ಆಯುಕ್ತಾಲಯಗಳ ವ್ಯಾಪ್ತಿಗೆ ಹುದ್ದೆಗಳ ಸ್ಥಳಾಂತರ-ಪರಿಷ್ಕೃತ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶದ ಕ್ರಮಾಂಕ: ಇಡಿ 163 ಯೋಯೋಕ 2003 ದಿನಾಂಕ: 10-11-2003

2) ಸರ್ಕಾರಿ ಆದೇಶದ ಕ್ರಮಾಂಕ: ಇಡಿ 163 ಯೋಯೋಕ 2003 ದಿನಾಂಕ: 12-10-2004

3) ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಅವರ ಪತ್ರ ಕ್ರಮಾಂಕ: ಸಿ5(1)ವರ್ಗ ಹು.ಸ್ಥ 27/2003-04,ದಿ: 31-5-2004

ಪ್ರಸ್ತಾವನೆ :

ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು ಅವರ ವ್ಯಾಪ್ತಿಯಲ್ಲಿದ್ದ ವಿವಿಧ ವೃಂದಗಳಿಗೆ ಸೇರಿದ ಒಟ್ಟು 137 ಖಾಯಂ ಹುದ್ದೆಗಳನ್ನು ಮೇಲೆ(1)ರಲ್ಲಿ ಓದಲಾದ ದಿನಾಂಕ :10-11-2003ರ ಆದೇಶದ ಅನುಬಂಧ-2ರ ಪ್ರಕಾರ ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಹಾಗೂ ಗುಲ್ಬರ್ಗಾ ಅವರುಗಳ ವ್ಯಾಪ್ತಿಗೆ ವರ್ಗಾಯಿಸಲಾಯಿತು. ತರುವಾಯ ಈ ಹುದ್ದೆಗಳನ್ನು ಮೇಲೆ (2)ರಲ್ಲಿ ಓದಲಾದ ದಿ:12-10-2004ರ ಸರ್ಕಾರಿ ಆದೇಶದಲ್ಲಿ ದಿನಾಂಕ: 01-4-2004ರಿಂದ ಒಂದು ವರ್ಷಗಳ ಅವಧಿಗೆ ವಿಸ್ತರಿಸಲಾಯಿತು.ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು ಅವರು ಮೇಲೆ(3)ರಲ್ಲಿ ಓದಲಾದ ದಿ:31-5-2004ರ ಪತ್ರದಲ್ಲಿ ದಿ:10-11-2003ರ ಸರ್ಕಾರಿ ಆದೇಶದನ್ವಯ ಆದ ವರ್ಗಾವಣೆಯು ಅನುಪಾತವನ್ನು ಆಧರಿಸಿ ಮಾಡಿರುವುದಿಲ್ಲ.ಬೆಂಗಳೂರು, ಧಾರವಾಡ ಮತ್ತು ಗುಲ್ಬರ್ಗ ಆಯುಕ್ತರುಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳ ಸಂಖ್ಯೆಯನ್ನು ಆಧರಿಸಿ ಪ್ರಕರಣವನ್ನು ಪರಿಶೀಲಿಸಲಾಗಿ ವರ್ಗಾಯಿಸಿದ ಹುದ್ದೆಗಳು ಹೆಚ್ಚಾಗಿರುವುದರಿಂದ ಅವುಗಳನ್ನು ಪರಾಮರ್ಶಿಸಿ ಪರಿಷ್ಕೃತ ಆದೇಶ ಹೊರಡಿಸಲು ಕೋರಿದ್ದಾರೆ.ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 212 ಯೋಯೋಕಾ 2004, ಬೆಂಗಳೂರು

ದಿನಾಂಕ: 06/11 /2004

ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು ಅವರ ವ್ಯಾಪ್ತಿಯಿಂದ ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ,ಧಾರವಾಡ ಅವರ ವ್ಯಾಪ್ತಿಗೆ 89 ಹುದ್ದೆಗಳನ್ನು, ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ,ಗುಲ್ಬರ್ಗ ಅವರ ವ್ಯಾಪ್ತಿಗೆ 48 ಹುದ್ದೆಗಳನ್ನೂ ಒಟ್ಟು 137 ಹುದ್ದೆಗಳನ್ನು ಸ್ಥಳಾಂತರಿಸಿದ ದಿನಾಂಕ: 10-11-2003ರ ಸರ್ಕಾರಿ ಆದೇಶವನ್ನು ಮಾರ್ಪಡಿಸಿದ ಸರ್ಕಾರವು ಈ ಆದೇಶದ ಅನುಬಂಧದಲ್ಲಿ ತೋರಿಸಿರುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ,ಧಾರವಾಡ ಅವರ ವ್ಯಾಪ್ತಿಗೆ 81 ಹುದ್ದೆಗಳನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ,ಗುಲ್ಬರ್ಗ ಅವರ ವ್ಯಾಪ್ತಿಗೆ 33 ಹುದ್ದೆಗಳನ್ನು, ಒಟ್ಟು 114

..2

SO PLG-B

ಹುದ್ದೆಗಳನ್ನು ಮಾತ್ರ ಸ್ಥಳಾಂತರಿಸಬೇಕೆಂದು ಆದೇಶಿಸುತ್ತದೆ.ಉಳಿದ 23 ಹುದ್ದೆಗಳು ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಅವರ ವ್ಯಾಪ್ತಿಯಲ್ಲೇ ಮುಂದುವರಿಯುತ್ತವೆ.

ಆಂತರಿಕ ಆರ್ಥಿಕ ಸಲಹೆಗಾರರು,ಶಿಕ್ಷಣ ಇಲಾಖೆ ಅವರ ಸಹಮತಿಯನ್ನು ಅ.ಟಿ. ಸಂಖ್ಯೆ:ಇಡಿ 505 ಐಎಫ್(ಬಿ.ಎ)2004,ದಿನಾಂಕ:11-10-2004ರಲ್ಲಿ ಪಡೆದು,ಈ ಆದೇಶ -ವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಕೆ.ಶ್ರೀಕಂಠೇಶ್ವರ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ(ಯೋಜನೆ),
ಶಿಕ್ಷಣ ಇಲಾಖೆ.

ಇವರಿಗೆ,

1) ಸಂಕಲನಾಧಿಕಾರಿ, ಕರ್ನಾಟಕ ರಾಜ್ಯ ಪತ್ರ,ಬೆಂಗಳೂರು
2) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
3) ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
5) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ
6) ನಿರ್ದೇಶಕರು,ಈಶಾನ್ಯ ವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯ,ಗುಲ್ಬರ್ಗ
7) ನಿರ್ದೇಶಕರು(ಪ್ರಾಥಮಿಕ) ಮತ್ತು (ಪ್ರೌಢ ಶಿಕ್ಷಣ),ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
8) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹ ನಿರ್ದೇಶಕರು
9) ಎಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,
10) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಳಗಾಂ,ಧಾರವಾಡ,ಗದಗ್,ಹಾವೇರಿ,ಉತ್ತರ ಕನ್ನಡ,ಬಿಜಾಪುರ,ಬಾಗಲಕೋಟೆ,ಗುಲ್ಬರ್ಗ,ಬೀದರ್,ರಾಯಚೂರು,ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲಾ ಪಂಚಾಯತ್‌ಗಳು
11) ಮುಖ್ಯ ಲೆಕ್ಕಾಧಿಕಾರಿಗಳು,ಬೆಳಗಾಂ,ಧಾರವಾಡ,ಗದಗ್,ಹಾವೇರಿ,ಉತ್ತರ ಕನ್ನಡ, ಬಿಜಾಪುರ,ಬಾಗಲಕೋಟೆ,ಗುಲ್ಬರ್ಗ,ಬೀದರ್,ರಾಯಚೂರು,ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲಾ ಪಂಚಾಯತ್‌ಗಳು
12) ಖಜಾನಾಧಿಕಾರಿಗಳು,ಬೆಳಗಾಂ,ಧಾರವಾಡ,ಗದಗ್,ಹಾವೇರಿ,ಉತ್ತರಕನ್ನಡ,ಬಿಜಾಪುರ, ಬಾಗಲಕೋಟೆ,ಗುಲ್ಬರ್ಗ,ಬೀದರ್,ರಾಯಚೂರು,ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲಾ ಪಂಚಾಯತ್‌ಗಳು
13) ಉಪ ನಿರ್ದೇಶಕರು,ನೆಟ್‌ವರ್ಕ್ ಮ್ಯಾನೇಜ್‌ಮೆಂಟ್,ಖನಿಜ ಭವನ,ನಂ.49,ರೇಸ್ ಕೋರ್ಸ್ ರಸ್ತೆ,ಬೆಂಗಳೂರು
14) ಖಜಾನಾಧಿಕಾರಿಗಳು,ರಾಜ್ಯ ಹುಜೂರು ಖಜಾನೆ,ಬೆಂಗಳೂರು
15) ಖಜಾನಾ ನಿರ್ದೇಶಕರು,ಪೋಡಿಯಂ ಬ್ಲಾಕ್, ಡಾ:ಅಂಬೇಡ್ಕರ್ ರಸ್ತೆ,ಬೆಂಗಳೂರು
16) ಸರ್ಕಾರದ ಸಹ ಕಾರ್ಯದರ್ಶಿಗಳು 1 ಮತ್ತು 2, ಶಿಕ್ಷಣ ಇಲಾಖೆ
17) ಸರ್ಕಾರದ ಸಹ ಕಾರ್ಯದರ್ಶಿಗಳು(ಉನ್ನತ ಶಿಕ್ಷಣ),ಶಿಕ್ಷಣ ಇಲಾಖೆ
18) ಸರ್ಕಾರದ ಅಧೀನ ಕಾರ್ಯದರ್ಶಿಗಳು,ಪ್ರಾಥಮಿಕ ಶಿಕ್ಷಣ/ಪ್ರೌಢ ಶಿಕ್ಷಣ/ಸೇವೆಗಳು 1 ಮತ್ತು 2/ಸೇವೆಗಳು-3/ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ/ಸಾಮಾನ್ಯ ಶಿಕ್ಷಣ ಇಲಾಖೆ
19) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು(ಉನ್ನತ ಶಿಕ್ಷಣ)
20) ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪ್ರಾಥಮಿಕ ಮತು ಪ್ರೌಢ ಶಿಕ್ಷಣ)ರವರ ಆಪ್ತ ಕಾರ್ಯದರ್ಶಿ
21) ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
22) ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು
23) ಅಧೀನ ಕಾರ್ಯದರ್ಶಿ,ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
24) ಸಪ್ತಾಹಿಕ ರಾಜ್ಯ ಪತ್ರ/ಮಾಸಿಕ ಸಂಕಲನ/ಶಾಖಾ ರಕ್ಷಾ ಕಡತ

SO PLG-B

(20)



ಕೆಳಗೆ ನಮೂದಿಸಿರುವ ಅಂಶಗಳನ್ನು ಅನುಷ್ಠಾನಗೊಳಿಸಲು ಆಯಾ ವಿಭಾಗಗಳಿಗೆ ಸಂಬಂಧಿಸಿದಂತೆ ಆಯಾ ಅಪರ ಆಯುಕ್ತರುಗಳಿಗೆ ಸರ್ಕಾರದ ಮಂಜೂರಾತಿ ನೀಡಲಾಗಿದೆ.

| ವಿವಿಧ ಅಂಶಗಳು | ಧಾರವಾಡ | ಗುಲ್ಬರ್ಗಾ |
|---|---|---|
| ಅ) ವಾಹನಗಳು (ಡಿಪ್ ಸೋರ್ಸ್ ಸಮಾಲೋಚಕರ ಹೊಂದಲು) | ರೂ. 5 ಲಕ್ಷ ಮೂರು ವಾಹನಗಳು | ರೂ. 3 ಲಕ್ಷ ಎರಡು ವಾಹನಗಳು |
| ಆ) ದೂರವಾಣಿಗಳು | ರೂ. 2 ಲಕ್ಷ ಹತ್ತು ಸಂಪರ್ಕಗಳು | ರೂ. 1 ಲಕ್ಷ ಐದು ಸಂಪರ್ಕಗಳು |
| ಇ) ಫ್ಯಾಕ್ಸ್, ಜೆರಾಕ್ಸ್, ಕಂಪ್ಯೂಟರ್ ಇತ್ಯಾದಿಗಳು | ರೂ. 5 ಲಕ್ಷ | ರೂ. 5 ಲಕ್ಷ |
| ಈ) ಪೀಠೋಪಕರಣಗಳು ಮತ್ತು ಜಲಬಡಿಕೆಗಳು | ರೂ. 5 ಲಕ್ಷ | ರೂ. 5 ಲಕ್ಷ |
| ಉ) ದುರಸ್ತಿ ಮತ್ತು ಬದಲಾವಣೆಗಳು | ರೂ. 5 ಲಕ್ಷ | ರೂ. 5 ಲಕ್ಷ |
| ಊ) ಸ್ಟೇಷನರಿ, ಲೇಖನ ಸಾಮಗ್ರಿ ಮತ್ತು ಇತರೆ ಸಾದಿಲ್ವಾರು | ರೂ. 6 ಲಕ್ಷ | ರೂ. 5 ಲಕ್ಷ |
| ಋ) ಸಿಬ್ಬಂದಿ ಪ್ರವಾಸ ಭತ್ಯೆ ಮತ್ತು ಕುಟ್ಟಭತ್ಯೆಗಳಿಗಾಗಿ | ರೂ. 2 ಲಕ್ಷ | ರೂ. 2 ಲಕ್ಷ |
| ಎ) ಬಾಡಿಗೆ, ದರ ಮತ್ತು ತೆರಿಗೆಗಳು | ರೂ. 2 ಲಕ್ಷ | ರೂ. 2 ಲಕ್ಷ |
| ಒಟ್ಟು | ರೂ. 32 ಲಕ್ಷ | ರೂ. 26 ಲಕ್ಷ |

ರೂ.ಹದಿನೇಳು ಲಕ್ಷಗಳ ಮಿತಿಯೊಳಗೆ ಮೇಲಿನ ವೆಚ್ಚಗಳನ್ನು ಭರಿಸಲು ಸಂಬಂಧಿಸಿದ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಇವರಿಗೆ ಸರ್ಕಾರದ ಅನುಮೋದನೆ ನೀಡಿದೆ.

7. ಆಯಾ ಕಾರ್ಯಾಲಯಗಳಿಗೆ ಅನ್ವಯಿಸುವಂತೆ ಸರ್ಕಾರಿ ಹಾಗೂ ಖಾಸಗಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದಂತೆ ಆದೇಶಗಳನ್ನು / ಸುತ್ತೋಲೆಗಳನ್ನು ಹೊರಡಿಸುವ / ತಿದ್ದುಪಡಿ ಮಾಡುವ ವಿಷಯದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರು ಹೊಂದಿರುವ ಎಲ್ಲಾ, ಆರ್ಥಿಕ, ಕಾರ್ಯನಿರ್ವಹಣಾ ಹಾಗೂ ಶಿಸ್ತು ಅಧಿಕಾರಗಳನ್ನು ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಇವರಿಗೆ ನೀಡಿದೆ. ತತ್ಸಂಬಂಧ ಹೊರಡಿಸಬೇಕಾದ ಆದೇಶಗಳನ್ನು ಹೊರಡಿಸಲೂ ಸಂಬಂಧಿಸಿದ ಇಲಾಖೆಗಳು ಕ್ರಮ ಕೈಗೊಳ್ಳತಕ್ಕದ್ದು.

8. ಅಪರ ಆಯುಕ್ತರು ಧಾರವಾಡ ಇವರು ಸಂಬಂಧಿಸಿದ ವೆಚ್ಚವನ್ನು ಆಯವ್ಯಯ ಶೀರ್ಷಿಕೆ 2202-02-001-0-03-051-ಸಾಮಾನ್ಯವೆಚ್ಚಗಳು-ಅಡಿಯಲ್ಲಿ ಮತ್ತು ಅಪರ ಆಯುಕ್ತರು ಗುಲ್ಬರ್ಗಾ ಇವರು ಆಯವ್ಯಯ ಲೆಕ್ಕಶೀರ್ಷಿಕೆ 2202-02-001-0-05-051-ಸಾಮಾನ್ಯವೆಚ್ಚಗಳು-ಅಡಿಯಲ್ಲಿ ಭರಿಸತಕ್ಕದ್ದು. ಈ ಆದೇಶವನ್ನು ಯೋಜನೆ ಮತ್ತು ಆರ್ಥಿಕ ಇಲಾಖೆಗಳು ಕ್ರಮವಾಗಿ ತಮ್ಮ ಅ.ಟಿ.ಸಂಖ್ಯೆ ಯೋಇ 80 ಆಆ 2003 ದಿನಾಂಕ 25.6.2003 ಮತ್ತು ಆಇ 682 ವೆಚ್ಚ 8/2003 ದಿನಾಂಕ 5.9.2003ರಲ್ಲಿ ನೀಡಿರುವ ಸಹಮತಿಯನ್ವಯ ಮತ್ತು ಅ.ಟಿ. ಸಂಖ್ಯೆ:ಆಇ:1068-ವೆಚ್ಚ-8/2003/ದಿನಾಂಕ:10-11-2003 ರಲ್ಲಿ ನೀಡಿರುವ ಅಭಿಪ್ರಾಯದನ್ವಯ ಹೊರಡಿಸಲಾಗಿದೆ.

ಕರ್ನಾಟಕದ ಘನವೆತ್ತ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ. ಶ್ರೀಕಂಠೇಶ್ವರ)
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಉಪ ಕಾರ್ಯದರ್ಶಿ(ಯೋಜನೆ)
ಶಿಕ್ಷಣ ಇಲಾಖೆ

ಇವರಿಗೆ

1. ಮಹಾಲೇಖಪಾಲರು, ಕರ್ನಾಟಕ-1 ಮತ್ತು 2 ಬೆಂಗಳೂರು
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ಕೃಷ್ಣಾ ಮೇಲ್ದಂಡೆ ಯೋಜನೆಯ ಆಯುಕ್ತರು, ಪುನರ್ವಸತಿ ಮತ್ತು ಭೂಸ್ವಾಧೀನ ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಹಾಗೂ ವಿಶೇಷಾಧಿಕಾರಿಗಳು, ನವನಗರ, ಬಾಗಲಕೋಟೆ
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ ಬೆಂಗಳೂರು
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿ ಆ ಸು ಇ, ವಿಧಾನ ಸೌಧ, ಬೆಂಗಳೂರು

(19)

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಉತ್ತರ ಕರ್ನಾಟಕದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯ (ಕಮೀಷನರೇಟ್)ಗಳನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ:
1. ದಿನಾಂಕ 21.3.2003ರಂದು ಮಾನ್ಯ ಮುಖ್ಯ ಮಂತ್ರಿಯವರು ವಿಧಾನ ಮಂಡಲದಲ್ಲಿ ಮಂಡಿಸಿದ 2003-04ನೇ ಸಾಲಿನ ಆಯವ್ಯಯ ಭಾಷಣ
2. ಸರ್ಕಾರಿ ಆದೇಶ ಸಂಖ್ಯೆ.ಡಿಪಿಎಆರ್ 11ಎಸ್‌ಎಆರ್ 2003 ದಿನಾಂಕ 17.4.2003
3. ಪುನರ್‌ವಸತಿ ಮತ್ತು ಭೂಸ್ವಾಧೀನ, ಕೃಷ್ಣಾ ಮೇಲ್ದಂಡೆ ಯೋಜನೆಯ ಆಯುಕ್ತರು ಹಾಗೂ ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಮತ್ತು ವಿಶೇಷಾಧಿಕಾರಿಗಳು ಇವರ ಪತ್ರ ಸಂಖ್ಯೆ.ಸಿಎಂಎಂಆರ್/ಸಿಪಿ/ 2003-04 ದಿನಾಂಕ.3.5.2003

------

ಪ್ರಸ್ತಾವನೆ:-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮೇಲೆ(1)ರಲ್ಲಿ ಓದಲಾದಂತೆ ಮಾನ್ಯ ಮುಖ್ಯಮಂತ್ರಿಯವರು 2003-04ನೇ ಸಾಲಿನ ಆಯವ್ಯಯವನ್ನು ವಿಧಾನಮಂಡಲದಲ್ಲಿ ದಿ:21-3-2003ರಂದು ಮಂಡಿಸಿದಾಗ ಉತ್ತರ ಕರ್ನಾಟಕದ ಅಭಿವೃದ್ಧಿ ಹಾಗೂ ಅಧಿಕಾರ ವಿಕೇಂದ್ರೀಕರಣದ ಸರ್ಕಾರದ ಪ್ರಯತ್ನವನ್ನು ಮುಂದುವರೆಸುವ ನಿಟ್ಟಿನಲ್ಲಿ ಮುಂಬೈ ಕರ್ನಾಟಕ ಮತ್ತು ಹೈದರಾಬಾದ್-ಕರ್ನಾಟಕದ ಶಾಲೆಗಳಿಗಾಗಿ ಪ್ರತ್ಯೇಕವಾಗಿ ಸಾರ್ವಜನಿಕ ಶಿಕ್ಷಣ ಆಯುಕ್ತರ ಕಛೇರಿಯನ್ನು ಗುಲ್ಬರ್ಗಾದಲ್ಲಿ ಸ್ಥಾಪಿಸುವುದಾಗಿ ಘೋಷಿಸಿದರು. ಮೇಲೆ(2)ರಲ್ಲಿ ಓದಲಾದ ದಿ:17-4-2003ರ ಆದೇಶದಲ್ಲಿ ಈ ಸಂಬಂಧವಾಗಿ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ನೀಡಲು ಕೃಷ್ಣಾ ಮೇಲ್ದಂಡೆ ಯೋಜನೆಯ ಆಯುಕ್ತರು(ಪುನರ್ ವಸತಿ ಮತ್ತು ಭೂ ಸ್ವಾಧೀನ)ಹಾಗೂ ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ ಇವರನ್ನು ವಿಶೇಷಾಧಿಕಾರಿಗಳಾಗಿ ನೇಮಿಸಲಾಯಿತು. ಮೇಲೆ(3)ರಲ್ಲಿ ಓದಲಾದ ದಿನಾಂಕ:3-5-2003ರ ಅರೆ ಸರ್ಕಾರಿ ಪತ್ರದಲ್ಲಿ ವಿಶೇಷಾಧಿಕಾರಿಗಳು ತಮ್ಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ಸರ್ಕಾರದ ಮಟ್ಟದಲ್ಲಿ ವಿವರವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

<u>ಸರ್ಕಾರಿ ಆದೇಶ ಸಂಖ್ಯೆ:ಇಡಿ 163 ಯೋಯೋಕ 2003,ಬೆಂಗಳೂರು,ದಿ:10-11-2003</u>

<u>(ಇಡಿ:151:ಸ್ಥಳಾಂತರ (ಯೋಜನೆ)2003,ದಿನಾಂಕ:10-11-2003)</u>

ರಾಜ್ಯದ ಉತ್ತರ ಕರ್ನಾಟಕದ ಹಾಲಿ ಬೆಳಗಾಂ ಕಂದಾಯ ವಿಭಾಗದ ಪ್ರದೇಶಗಳನ್ನು ಹಾಗೂ ಹಾಲಿ ಗುಲ್ಬರ್ಗಾ ಕಂದಾಯ ವಿಭಾಗಗಳ ಪ್ರದೇಶಗಳನ್ನು ಒಳಗೊಂಡಂತೆ ಕ್ರಮವಾಗಿ ಎರಡು ಹೆಚ್ಚುವರಿ ಸಾರ್ವಜನಿಕ ಶಿಕ್ಷಣ ಆಯುಕ್ತಾಲಗಳನ್ನು ಸ್ಥಾಪಿಸಲು ಸರ್ಕಾರವು ಮಂಜೂರಾತಿ ನೀಡಿದೆ. ಈ ಹೆಚ್ಚುವರಿ ಆಯುಕ್ತಾಲಯಗಳ ವ್ಯಾಪ್ತಿಗೆ ಬೆಳಗಾಂ, ಹಾಗೂ ಗುಲ್ಬರ್ಗಾ, ಕಂದಾಯ ವಿಭಾಗಗಳಿಗೆ ಒಳಗೊಂಡ ಜಿಲ್ಲೆಗಳು ಕ್ರಮವಾಗಿ ಬರುತ್ತವೆ. ಇದಕ್ಕಾಗಿ ಗುಲ್ಬರ್ಗಾದಲ್ಲಿ ಈಗಾಗಲೇ ಇರುವ ನಿರ್ದೇಶನಾಲಯವನ್ನು ಮೇಲ್ದರ್ಜೆಗೆ ಏರಿಸಲಾಗಿದೆ.

2. ಈ ಹೊಸ ಆಯುಕ್ತಾಲಯಗಳ ಸ್ಥಾಪನೆಗೆ ಸಂಬಂಧಿಸಿದಂತೆ ಅನುಬಂಧ-1ರಲ್ಲಿ ವಿವಿಧ ವೃಂದಗಳ ಹೊಸ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡಲಾಗಿದೆ. ಈ ಸೃಜಿಸಲಾದ ಹುದ್ದೆಗಳನ್ನು ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಆಯುಕ್ತರ ಕಾರ್ಯಾಲಯದಲ್ಲಿರುವ ಸಮನಾಂತರ ಹುದ್ದೆಗಳನ್ನು ಭರ್ತಿ ಮಾಡಲು ಅನುಸರಿಸುತ್ತಿರುವ ವಿಧಿವಿಧಾನಗಳಂತೆಯೇ ಭರ್ತಿ ಮಾಡಬೇಕು. ಅಲ್ಲದೆ ಹೊಸ ಕಾರ್ಯಾಲಯಗಳಿಗೆ ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಆಯುಕ್ತರ ಕಾರ್ಯಾಲಯದಿಂದ ಅನುಬಂಧ-2ರಲ್ಲಿ ವಿವರಿಸಿರುವ ವಿವಿಧ ವೃಂದಗಳ ಹುದ್ದೆಗಳನ್ನು ಸ್ಥಳಾಂತರಿಸಲು ಸಹ ಸರ್ಕಾರವು ಅನುಮೋದನೆ ನೀಡಿದೆ. ಈ ಹುದ್ದೆಗಳನ್ನು ಕೂಡಲೇ ಸ್ಥಳಾಂತರಿಸಲು ಸಾರ್ವಜನಿಕ ಶಿಕ್ಷಣ ಆಯುಕ್ತರು, ಬೆಂಗಳೂರು ಇವರು ಕ್ರಮ ಕೈಗೊಳ್ಳತಕ್ಕದ್ದು.

3. ಈ ಆಯುಕ್ತಾಲಯಗಳನ್ನು ಧಾರವಾಡದಲ್ಲಿ ಖಾಲಿ ಲಭ್ಯವಿರುವ ಸರ್ಕಾರಿ ಕಟ್ಟಡದಲ್ಲಿ ಹಾಗೂ ಗುಲ್ಬರ್ಗಾದಲ್ಲಿ ಹಾಲಿ [illegible] ಕಾಲಯದಲ್ಲಿ ನಿರ್ದೇಶನಾಲಯ ನಡೆಸುತ್ತಿರುವ ಸರ್ಕಾರಿ ಕಟ್ಟಡದಲ್ಲಿ ಸ್ಥಾಪಿಸತಕ್ಕದ್ದು.

4. ಈ ಎರಡೂ ಆಯುಕ್ತಾಲಯಗಳ ಅಪರ ಆಯುಕ್ತರುಗಳು ತಮ್ಮ ಅಧಿಕಾರ ವ್ಯಾಪ್ತಿಯ [illegible] ವಿಭಾಗಕ್ಕೆ ಸಂಬಂಧಿಸಿದ ಜಿಲ್ಲೆಗಳಲ್ಲಿನ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಹಾಗೂ ಶಿಕ್ಷಣ ಸಂಸ್ಥೆಗಳ ಎಲ್ಲಾ ವಿಷಯಗಳನ್ನು ಸಂಬಂಧಿಸಿದ ವಿಷಯಗಳ ಬಗ್ಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತಾರೆ ಎಂದು ಆದೇಶ ನೀಡಿದೆ. ಇವರುಗಳನ್ನು ಬೃಹತ್ ಇಲಾಖಾ ಮುಖ್ಯಸ್ಥರು ಎಂದು ಘೋಷಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಾಗೆಯೇ ಈ ಕಾರ್ಯಾಲಯಗಳಲ್ಲಿರುವ ನಿರ್ದೇಶಕರುಗಳಿಗೂ ಸಹ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವಲಯಗಳ ಸರ್ಕಾರಿ ಮತ್ತು ಖಾಸಗಿ ಶಾಲೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಇತ್ಯರ್ಥಗೊಳಿಸುವ ಅಧಿಕಾರ ನೀಡಿದೆ ಎಂದೂ ಆದೇಶಿಸಿದೆ.

5. ಮೇಲಿನ ಆಯುಕ್ತಾಲಯಗಳಿಗೆ ಕೆಳಗೆ ನಮೂದಿಸಿರುವಂತೆ ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಾರ್ಯಾಲಯದಿಂದ ಈ ಕೆಳಕಂಡ ವಸ್ತುಗಳನ್ನು ಕೂಡಲೇ ವರ್ಗಾಯಿಸಲು ಸಾರ್ವಜನಿಕ ಶಿಕ್ಷಣ ಆಯುಕ್ತರು ಕ್ರಮ ತೆಗೆದುಕೊಳ್ಳತಕ್ಕದ್ದು.

| | ಧಾರವಾಡ | ಗುಲ್ಬರ್ಗಾ | ಒಟ್ಟು |
|---|---|---|---|
| ಅ) ವಾಹನಗಳು (ಅಪರ ಆಯುಕ್ತರುಗಳ ಹುದ್ದೆಗಳ ಬಳಕೆಗೆ) | [illegible] | 1 | 3 |
| ಆ) ದೂರವಾಣಿ ಸಂಪರ್ಕಗಳು | 1 | -- | 1 |
| ಇ) ಕಂಪ್ಯೂಟರ್‌ಗಳು/ಪ್ರಿಂಟರ್‌ಗಳು | 20 | 5 | 25 |

<u>ಸರ್ಕಾರಿ ಆದೇಶ ಸಂಖ್ಯೆ: ಇಡಿ 323 ಡಿಜಿಇ 2002, ಬೆಂಗಳೂರು, ದಿನಾಂಕ 20ನೇ ಸೆಪ್ಟೆಂಬರ್ 2002</u>

(ಇಡಿ 138 [illegible] 2002, ದಿನಾಂಕ: 23ನೇ ಸೆಪ್ಟೆಂಬರ್ 2002)

ಈಶಾನ್ಯ ವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯಕ್ಕೆ ಸರ್ಕಾರಿ ಆದೇಶ ಸಂಖ್ಯೆ: ಇಡಿ 285 ಡಿಜಿಇ 2001, ದಿನಾಂಕ: 25-1-2002ರಲ್ಲಿ ಮರುಹೊಂದಾಣಿಕೆ ಮೂಲಕ ಸ್ಥಳಾಂತರಿಸಿ ಮಂಜೂರು ಮಾಡಲಾದ ಒಟ್ಟು 35(ಮೂವತ್ತೈದು) ವಿವಿಧ ವರ್ಗದ ಹುದ್ದೆಗಳಲ್ಲಿ ಶಿಕ್ಷಣಾಧಿಕಾರಿ ದರ್ಜೆಯ(ಏಳು) 7 ಹುದ್ದೆಗಳು ಮತ್ತು ವ್ಯವಸ್ಥಾಪಕರ ದರ್ಜೆಯ(ಒಂದು) 1 ಹುದ್ದೆ ಒಟ್ಟು 8(ಎಂಟು) ಹುದ್ದೆಗಳಿಗೆ ವೇತನಕ್ಕಾಗಿ ರೂ.10.00 (ಹತ್ತು ಲಕ್ಷ ರೂ.ಗಳು) ಲಕ್ಷಗಳನ್ನು ಲೆಕ್ಕಶೀರ್ಷಿಕೆ 2202-02-001-01-05-500 (ಯೋಜನೇತರ)ರ ಹೆಚ್ಚುವರಿಯಾಗಿ ಬಿಡುಗಡೆ ಮಾಡಿ ಸರ್ಕಾರವು ಆದೇಶಿಸಿದೆ. ಈ ಮೊತ್ತವನ್ನು ಭರಿಸಲು ನಿರ್ದೇಶಕರು, ಈಶಾನ್ಯವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯ ಗುಲ್ಬರ್ಗಾ ಇವರಿಗೆ ಅನುಮತಿ ನೀಡಿದೆ.

ಒಂದು ಉಪ ನಿರ್ದೇಶಕರ(ಆಡಳಿತ) ಹುದ್ದೆಯನ್ನು ಡಿ.ಎಸ್.ಇ.ಆರ್.ಟಿ.ಯಲ್ಲಿನ ಹುದ್ದೆಯನ್ನು ಸ್ಥಳಾಂತರಿಸುವುದರಿಂದ ಸದರಿ ಹುದ್ದೆಗೆ ರಾಜ್ಯವಲಯದ ಡಿ.ಎಸ್.ಇ.ಆರ್.ಟಿ.ಯಲ್ಲಿನ ಸ್ಥಳಾಂತರಿಸಿದ ಹುದ್ದೆಗೆ ಬದಲಾಗಿ 2002-03ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ಹಣದಲ್ಲಿ ಅವಶ್ಯಕ ಹಣವನ್ನು ಡಿ.ಎಸ್.ಇ.ಆರ್.ಟಿ. ಸಂಸ್ಥೆಯಿಂದ ಈಶಾನ್ಯ ವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯಕ್ಕೆ ಹಂಚಿಕೆ ಮಾಡಿ ಬಿಡುಗಡೆ ಮಾಡಲು ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಬೆಂಗಳೂರು ಇವರಿಗೆ ಸೂಚಿಸಲಾಗಿದೆ.

ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಹೆಚ್ಚುವರಿ ಮೊತ್ತವನ್ನು 2002-03ನೇ ಸಾಲಿನ ಆರ್ಥಿಕ ವರ್ಷ ಕೊನೆಗೊಳ್ಳುವ ಪೂರ್ವದಲ್ಲಿ ನಿರೀಕ್ಷಿತ ಉಳಿತಾಯದಿಂದ ಮರು ಹೊಂದಾಣಿಕೆ ಮೂಲಕ ಅಥವಾ ಪೂರಕ ಅಂದಾಜಿನಲ್ಲಿ ಸೇರಿಸಿ ಸಕ್ರಮಗೊಳಿಸಲು ಅಗತ್ಯ ಪ್ರಸ್ತಾವನೆಯನ್ನು ನಿಗದಿತ ನಮೂನೆಯಲ್ಲಿ ಸಕಾಲದಲ್ಲಿ ಸಲ್ಲಿಸಲು ಸಾರ್ವಜನಿಕ ಶಿಕ್ಷಣ ಆಯುಕ್ತರಿಗೆ ಸೂಚಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ: ಆಇ 457 ವೆಚ್ಚ-8: 2002, ದಿನಾಂಕ: 7-9-2002ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್. ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ನಿರ್ದೇಶಕರು, ಈಶಾನ್ಯ ವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯ, ಗುಲಬರ್ಗಾ
4. ನಿರ್ದೇಶಕರು, ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು
5. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
6. ಜಿಲ್ಲಾ ಖಜಾನಾಧಿಕಾರಿಗಳು, ಗುಲಬರ್ಗಾ
7. ಉಪ ಕಾರ್ಯದರ್ಶಿ-2, ಆರ್ಥಿಕ ಇಲಾಖೆ, ಬೆಂಗಳೂರು
8. ಉಪ ಕಾರ್ಯದರ್ಶಿ-3/ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ
9. ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ
10. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
11. ಕಚೇರಿ ಪ್ರತಿ / ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಶೈಕ್ಷಣಿಕವಾಗಿ ಹಿಂದುಳಿದಿರುವ ಈಶಾನ್ಯ ವಲಯದ ಏಳು ಜಿಲ್ಲೆಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ರಚಿಸಲಾದ ಈಶಾನ್ಯ ವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯಕ್ಕೆ ಸ್ಥಳಾಂತರಿಸಲಾದ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದ ವೇತನವನ್ನು ಭರಿಸಲು ಆಯವ್ಯಯವನ್ನು ವರ್ಗಾಯಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಇಡಿ 285 ಡಿಪಿಐ 2001, ದಿನಾಂಕ: 16-6-2001
2. ಸರ್ಕಾರಿ ಆದೇಶ ಸಂಖ್ಯೆ: ಇಡಿ 285 ಡಿಪಿಐ 2001, ದಿನಾಂಕ: 25-1-2002
3. ಸರ್ಕಾರಿ ಆದೇಶ ಸಂಖ್ಯೆ: ಇಡಿ 285 ಡಿಪಿಐ 2001, ದಿನಾಂಕ: 25-1-2002
4. ಸರ್ಕಾರಿ ಆದೇಶ ಸಂಖ್ಯೆ: ಇಡಿ 285 ಡಿಪಿಐ 2001, ದಿನಾಂಕ: 25-1-2002
5. ಸರ್ಕಾರಿ ಅಧಿಸೂಚನೆ ಇಡಿ 285 ಡಿಪಿಐ 2001, ದಿನಾಂಕ: 6-3-2002
6. ಗುಲ್ಬರ್ಗಾದ ಈಶಾನ್ಯ ವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯದ ನಿರ್ದೇಶಕರ ಪತ್ರ ಸಂಖ್ಯೆ: ಈವ ಆಡಳಿತ ಹುಸಂ: 2002-03:115, ದಿನಾಂಕ: 20-4-2002

ಪ್ರಸ್ತಾವನೆ:-

ಮೇಲೆ 1 ರಲ್ಲಿ ಓದಲಾದ ದಿನಾಂಕ: 16-6-2001ರ ಸರ್ಕಾರಿ ಆದೇಶದಲ್ಲಿ ನಿರ್ದೇಶಕರು (ಕಾರ್ಯಕ್ರಮಗಳು) ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ — ಈ ಹುದ್ದೆಯನ್ನು ನಿರ್ದೇಶಕರು ಈಶಾನ್ಯ ವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯ, ಡಿಪಿಇಪಿ, ಗುಲ್ಬರ್ಗಾ ಎಂದು ಪುನರ್ ಪದನಾಮೀಕರಿಸಿ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದೆ.

ಮೇಲೆ 2 ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಉತ್ತರ ಕರ್ನಾಟಕದ ಶೈಕ್ಷಣಿಕವಾಗಿ ಹಿಂದುಳಿದಿರುವ ಭಾಗಗಳಾದ ಬೀದರ, ಗುಲಬರ್ಗಾ, ರಾಯಚೂರು, ಕೊಪ್ಪಳ, ಬಿಜಾಪುರ, ಬಳ್ಳಾರಿ ಹಾಗೂ ಬಾಗಲಕೋಟೆ ಜಿಲ್ಲೆಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸುವ ಸಲುವಾಗಿ ಗುಲ್ಬರ್ಗಾವನ್ನು ಕೇಂದ್ರಸ್ಥಾನವನ್ನಾಗಿರಿಸಿಕೊಂಡು ಹೊಸದಾಗಿ ಈಶಾನ್ಯ ವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯ, ಗುಲಬರ್ಗಾ ಎಂದು ಹೊಸ ನಿರ್ದೇಶನಾಲಯವನ್ನು ಸ್ಥಾಪಿಸಿ ಅದಕ್ಕೆ ವಿವಿಧ ದರ್ಜೆಯ ಹುದ್ದೆಗಳನ್ನು ಮರುಹೊಂದಾಣಿಕೆ ಮುಖಾಂತರ ಸ್ಥಳಾಂತರಿಸಿ ಮಂಜೂರು ಮಾಡಲಾಯಿತು.

ಮೇಲೆ 3 ರಲ್ಲಿ ಓದಲಾದ ದಿನಾಂಕ 25-1-2002ರ ಸರ್ಕಾರಿ ಆದೇಶದಲ್ಲಿ ಈಶಾನ್ಯ ವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ 7 ಜಿಲ್ಲೆಗಳಲ್ಲಿನ ಗ್ರೂಪ್ ಬಿ ಅಧಿಕಾರಿಗಳನ್ನೊಳಗೊಂಡಂತೆ ಗ್ರೂಪ್ ಸಿ ಮತ್ತು ಗ್ರೂಪ್ ಡಿ ನೌಕರರನ್ನು ವಲಯದ ವ್ಯಾಪ್ತಿಯೊಳಗೆ ನಿಯೋಜಿಸುವ ಅಧಿಕಾರವನ್ನು ಈಶಾನ್ಯ ವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯದ ನಿರ್ದೇಶಕರಿಗೆ ನೀಡಲಾಯಿತು.

ಮೇಲೆ 4 ರಲ್ಲಿ ನಮೂದಿಸಲಾಗಿರುವ ದಿನಾಂಕ: 25-1-2002ರ ಸರ್ಕಾರಿ ಆದೇಶದಲ್ಲಿ ಈಶಾನ್ಯ ವಲಯ ನಿರ್ದೇಶನಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ 7 ಜಿಲ್ಲೆಗಳಲ್ಲಿ ಸರ್ಕಾರಿ ಪ್ರೌಢ ಮತ್ತು ಪ್ರಾಥಮಿಕ ಶಾಲೆಗಳಿಗೆ (ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಶಾಲೆಗಳನ್ನು ಹೊರತುಪಡಿಸಿ) ಸಂಬಂಧಿಸಿದಂತೆ ಹಾಲಿ ಇಲಾಖೆಯ ನಿರ್ದೇಶಕರು (ಪ್ರೌಢಶಿಕ್ಷಣ) ಮತ್ತು ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಇವರು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಚಲಾಯಿಸಲು ನಿರ್ದೇಶಕರು, ಈಶಾನ್ಯವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯ ಇವರಿಗೆ ಪ್ರತ್ಯಾಯೋಜಿಸಿ ಆದೇಶ ಹೊರಡಿಸಲಾಯಿತು.

ಮೇಲೆ 5 ರಲ್ಲಿ ಓದಲಾದ ದಿನಾಂಕ: 6-3-2002ರ ಸರ್ಕಾರಿ ಅಧಿಸೂಚನೆಯಲ್ಲಿ 8 ಮಂದಿ ಅಧಿಕಾರಿಗಳನ್ನು ಸ್ಥಳನಿಯುಕ್ತಿಗೊಳಿಸಿ ಆದೇಶ ಹೊರಡಿಸಲಾಯಿತು.

ಮೇಲೆ 6 ರಲ್ಲಿ ಓದಲಾದ ತಮ್ಮ ದಿನಾಂಕ: 20-4-2002ರ ಪತ್ರದಲ್ಲಿ 7 ಜಿಲ್ಲಾ ಶಿಕ್ಷಣಾಧಿಕಾರಿಗಳ ಹುದ್ದೆಗಳು ಮತ್ತು 1 ವ್ಯವಸ್ಥಾಪಕರ ಹುದ್ದೆಯ ಆಯವ್ಯಯವನ್ನು ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಿಂದ ಈಶಾನ್ಯ ವಲಯದ ಲೆಕ್ಕಶೀರ್ಷಿಕೆಗೆ ವರ್ಗಾವಣೆ ಮಾಡುವ ಪ್ರಸ್ತಾವನೆಯನ್ನು ಈಶಾನ್ಯವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯದ ನಿರ್ದೇಶಕರು ಸಲ್ಲಿಸಿದ್ದು ಇದನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

– 2

| (1) | (2) | (3) | (4) |
|---|---|---|---|
| 3. | ಶಿಕ್ಷಣಾಧಿಕಾರಿ (ಗ್ರೂಪ್-ಎ ಕಿರಿಯ ಶ್ರೇಣಿ) | 7 | ಈಶಾನ್ಯ ವಲಯ ವ್ಯಾಪ್ತಿಯಲ್ಲಿನ ಗುಲ್ಬರ್ಗಾ, ಬೀದರ್, ಬಳ್ಳಾರಿ, ಕೊಪ್ಪಳ, ರಾಯಚೂರು, ವಿಜಾಪುರ, ಬಾಗಲಕೋಟೆ ಜಿಲ್ಲಾ ಉಪನಿರ್ದೇಶಕರ ಕಛೇರಿಗಳಲ್ಲಿಯ 2 ಶಿಕ್ಷಣಾಧಿಕಾರಿ ಹುದ್ದೆಗಳ ಪೈಕಿ ತಲಾ 1 ರಂತೆ ಶಿಕ್ಷಣಾಧಿಕಾರಿ ಹುದ್ದೆಯನ್ನು ಈ ನಿರ್ದೇಶನಾಲಯಕ್ಕೆ ಸ್ಥಳಾಂತರಿಸುವುದರಿಂದ |
| 4. | ವ್ಯವಸ್ಥಾಪಕರು | 1 | ಬೀದರ್ ಜಿಲ್ಲಾ ಉಪನಿರ್ದೇಶಕರ ಕಛೇರಿಯಲ್ಲಿ ಪತ್ರಾಂಕಿತ ಅಧಿಕಾರಿ ಮತ್ತು ಮ್ಯಾನೇಜರ್ 2 ಹುದ್ದೆಗಳು ಇದ್ದು, ಇದರಲ್ಲಿ 1 ಮ್ಯಾನೇಜರ್ ಹುದ್ದೆಯನ್ನು ಸ್ಥಳಾಂತರಿಸುವುದರಿಂದ |
| 5. | ಲೆಕ್ಕಪತ್ರ ಅಧೀಕ್ಷಕರು | 1 | ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಯಲ್ಲಿರುವ ಲೆಕ್ಕಪತ್ರ ಅಧೀಕ್ಷಕರ ಹುದ್ದೆಯನ್ನು ಸ್ಥಳಾಂತರಿಸುವುದರಿಂದ |
| 6. | ಪ್ರಥಮ ದರ್ಜೆ : ದ್ವಿತೀಯ ದರ್ಜೆ ಸಹಾಯಕ | 20 | ಪ್ರಾಥಮಿಕ ಶಿಕ್ಷಣ ನಿರ್ದೇಶನಾಲಯದಿಂದ 10 ಹಾಗೂ ಪ್ರೌಢಶಿಕ್ಷಣ ನಿರ್ದೇಶನಾಲಯದಿಂದ 10 ಪ್ರಥಮ ದರ್ಜೆ ಸಹಾಯಕರ:ದ್ವಿ.ದ.ಸ.ಹುದ್ದೆಗಳನ್ನು ಸ್ಥಳಾಂತರಿಸುವುದರಿಂದ |
| 7. | ಶೀಘ್ರಲಿಪಿಗಾರರು | 1 | ಸಾರ್ವಜನಿಕ ಶಿಕ್ಷಣ ಇಲಾಖೆಯ ಇನ್ನಿತರ ಕಛೇರಿಯಲ್ಲಿ ಅಸ್ತಿತ್ವದಲ್ಲಿರುವ ಹುದ್ದೆಗಳನ್ನು ಸ್ಥಳಾಂತರಿಸುವುದು. ಸಾರ್ವಜನಿಕ ಶಿಕ್ಷಣ ಇಲಾಖಾ ಆಯುಕ್ತರು ಸ್ಥಳಾಂತರಿಸಲಾದ ಹುದ್ದೆಗಳನ್ನು ಗುರುತಿಸಿ ಸ್ಥಳಾಂತರಿಸಿ ಆದೇಶ ಹೊರಡಿಸುವುದು. |
| 8. | ಕಂಪ್ಯೂಟರ್ ಪ್ರೋಗ್ರಾಮರ್ | 1 | |
| 9. | ವಾಹನ ಚಾಲಕ | 2 | |

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 1153.ವೆಚ್ಚ-8, 2001, ದಿನಾಂಕ: 19.1.2002 ರಲ್ಲಿ ನೀಡಿದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್. ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ರಾಜ್ಯ ಯೋಜನಾ ನಿರ್ದೇಶಕರು, ಡಿಪಿಇಪಿ, ನಂ.8, ಕನ್ನಿಂಗ್‌ಹ್ಯಾಂ ರಸ್ತೆ, ಮಾರ್ಕೆಟಿಂಗ್ ಫೆಡರೇಶನ್ ಕಟ್ಟಡ, ಬೆಂ-1
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೀದರ್: ಗುಲ್ಬರ್ಗಾ: ರಾಯಚೂರು: ಕೊಪ್ಪಳ: ವಿಜಾಪುರ: ಬಳ್ಳಾರಿ: ಬಾಗಲಕೋಟೆ ಜಿಲ್ಲೆ
5. ನಿರ್ದೇಶಕರು, ಈಶಾನ್ಯ ವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯ, ಗುಲ್ಬರ್ಗಾ
6. ವಿಭಾಗೀಯ ಕಾರ್ಯದರ್ಶಿ, ಕ.ಪ್ರೌ.ಶಿ.ಪ.ಮಂಡಳಿ ಹಾಗೂ ಪದನಿಮಿತ್ತ ಸಹನಿರ್ದೇಶಕರು, ಸಾ.ಶಿ.ಇಲಾಖೆ ಬೆಂಗಳೂರು ವಿಭಾಗ: ಮೈಸೂರು ವಿಭಾಗ: ಬೆಳಗಾವಿ ವಿಭಾಗ: ಗುಲ್ಬರ್ಗಾ ವಿಭಾಗ
7. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು
8. ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು
9. ಸರ್ಕಾರದ ಉಪಕಾರ್ಯದರ್ಶಿ-3, ಶಿಕ್ಷಣ ಇಲಾಖೆ:: ಅಧೀನ ಕಾರ್ಯದರ್ಶಿ, ವೆಚ್ಚ-8, ಆರ್ಥಿಕ ಇಲಾಖೆ
10. [illegible] ರಕ್ಷಾ ಕಡತ : ಬಿಡಿ ಪ್ರತಿಗಳು

ವಿಷಯ: ಉತ್ತರ ಕರ್ನಾಟಕದ ಶೈಕ್ಷಣಿಕವಾಗಿ ಹಿಂದುಳಿದಿರುವ ಜಿಲ್ಲೆಗಳ ಅಭಿವೃದ್ಧಿಗಾಗಿ ಈಶಾನ್ಯ ವಲಯದ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯವನ್ನು ರಚಿಸುವ ಬಗ್ಗೆ

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಇಡಿ 285 ಡಿಪಿಐ 2001 ದಿನಾಂಕ: 16.6.2001 ಮತ್ತು 10.9.2001

2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಅವರ ಪತ್ರ ಸಂಖ್ಯೆ: ಸಿ1. ಇತರೆ 11:2001, ದಿನಾಂಕ: 31.8.2001

ಪ್ರಸ್ತಾವನೆ:—

ಓದಲಾದ (1)ರ ಸರ್ಕಾರದ ಆದೇಶದಲ್ಲಿ ನಿರ್ದೇಶಕರು (ಕಾರ್ಯಕ್ರಮಗಳು) ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನಾ ಕೇಂದ್ರ ಈ ಹುದ್ದೆಯನ್ನು ನಿರ್ದೇಶಕರು, ಈಶಾನ್ಯ ವಲಯದ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯ, ಗುಲ್ಬರ್ಗಾ ಹಾಗೂ ನಿರ್ದೇಶಕರು (ಕಾರ್ಯಕ್ರಮಗಳು) ಡಿ ಪಿ ಇ ಪಿ ಗುಲ್ಬರ್ಗಾ ಎಂದು ಪುನರ್ ಪದನಾಮೀಕರಿಸಿ ಆದೇಶಿಸಲಾಗಿದೆ.

ಓದಲಾದ (2)ರ ಪತ್ರದಲ್ಲಿ ಈ ನಿರ್ದೇಶನಾಲಯವು ಸಮರ್ಪಕವಾಗಿ ಕೆಲಸ ನಿರ್ವಹಿಸುವಂತಾಗಲು ಮತ್ತು ಉದ್ದೇಶವು ಈಡೇರುವಂತಾಗಲು ಆಯುಕ್ತರು ಈ ನಿರ್ದೇಶನಾಲಯವನ್ನು ''ಈಶಾನ್ಯ ವಲಯದ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯ, ಗುಲ್ಬರ್ಗಾ'' ಎಂದು ಸೃಜಿಸಿ ಆದೇಶವನ್ನು ಹೊರಡಿಸಬೇಕೆಂದು ಕೋರಿರುತ್ತಾರೆ. ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಅದರಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 285 ಡಿಪಿಐ 2001, ಬೆಂಗಳೂರು, ದಿನಾಂಕ: **25**ನೇ ಜನವರಿ 2002

ಸರ್ಕಾರಿ ಆದೇಶ ಸಂಖ್ಯೆ: ಇಡಿ 285 ಡಿಪಿಐ 2001, ದಿನಾಂಕ: 16.6.2001 ಮತ್ತು 10.9.2001ರ ಆದೇಶಗಳನ್ನು ಮಾರ್ಪಡಿಸಿ ಮತ್ತು ಉತ್ತರ ಕರ್ನಾಟಕದ ಶೈಕ್ಷಣಿಕವಾಗಿ ಹಿಂದುಳಿದಿರುವ ಭಾಗಗಳಾದ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಿಜಾಪುರ, ಬಳ್ಳಾರಿ ಹಾಗೂ ಬಾಗಲಕೋಟೆ ಜಿಲ್ಲೆಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸುವ ಸಲುವಾಗಿ ಗುಲ್ಬರ್ಗಾವನ್ನು ಕೇಂದ್ರ ಸ್ಥಾನವನ್ನಾಗಿರಿಸಿಕೊಂಡು ಹೊಸದಾಗಿ ''ಈಶಾನ್ಯ ವಲಯದ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯ, ಗುಲ್ಬರ್ಗಾ'' ಎಂದು ಹೊಸ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದೆ ಮತ್ತು ಈ ಹೊಸ ನಿರ್ದೇಶನಾಲಯಕ್ಕೆ ಈ ಕೆಳಕಂಡಂತೆ ವಿವಿಧ ಹುದ್ದೆಗಳನ್ನು ಮರು ಹೊಂದಾಣಿಕೆಯ ಮೂಲಕ ಸ್ಥಳಾಂತರಿಸಿ ಮಂಜೂರು ಮಾಡಲಾಗಿದೆ.

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ | ಹುದ್ದೆಗಳ ಸಂಖ್ಯೆ | ಷರಾ |
|---|---|---|---|
| 1 | 2 | 3 | 4 |
| 1. | ನಿರ್ದೇಶಕರು | 1 | ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯಲ್ಲಿನ ನಿರ್ದೇಶಕರು (ಕಾರ್ಯಕ್ರಮಗಳು) ಈ ಹುದ್ದೆಯನ್ನು ಈ ನಿರ್ದೇಶನಾಲಯಕ್ಕೆ ಸ್ಥಳಾಂತರಿಸುವುದರ ಮೂಲಕ ಮಂಜೂರು ಮಾಡಲಾಗಿದೆ. |
| 2. | ಉಪ ನಿರ್ದೇಶಕರು | 1 | ಡಿ ಎಸ್ ಇ ಆರ್ ಟಿ ಯಲ್ಲಿ 4 ಉಪನಿರ್ದೇಶಕರ ಹುದ್ದೆಗಳ ಪೈಕಿ ಒಂದು ಹುದ್ದೆಯನ್ನು ಸ್ಥಳಾಂತರಿಸುವುದರಿಂದ |

ಆಯುಕ್ತರ ಕಛೇರಿ
ಸಾರ್ವಜನಿಕ ಶಿಕ್ಷಣ ಇಲಾಖೆ
ಸ್ವೀಕೃತಿ ವಿಭಾಗ
ಗಣಕಯಂತ್ರ ಕ್ರಮ ಸಂಖ್ಯೆ 8729/2
ದಿನಾಂಕ 8/2/2

4. ರಾಜ್ಯ ಯೋಜನಾ ನಿರ್ದೇಶಕರು, ಡಿಪಿಇಪಿ, ನಂ.8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು
5. ಎಲ್ಲಾ ನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ
6. ಎಲ್ಲಾ ಜಂಟಿ/ಉಪ ನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ
7. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಕಾರ್ಯದರ್ಶಿಗಳು ಆಪ್ತ ಕಾರ್ಯದರ್ಶಿಗಳು
8. ಜಂಟಿ ಕಾರ್ಯದರ್ಶಿಗಳು-1, ಶಿಕ್ಷಣ ಇಲಾಖೆ ಇವರ ಆಪ್ತಸಹಾಯಕರು
7. ಶಾಖೆಯ ರಕ್ಷಾ ಕಡತ:: ಹೆಚ್ಚುವರಿ ಪ್ರತಿಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಧಾರವಾಡ ಮತ್ತು ಗುಲ್ಬರ್ಗಾ ಆಯುಕ್ತಾಲಯಗಳಲ್ಲಿ ಲಿಪಿಕ ವೃಂದದ ಉಪನಿರ್ದೇಶಕರು (ಆಡಳಿತ) ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ.ಇಡಿ 160 ಎಸ್‌ಓಹೆಚ್ 2003, ದಿನಾಂಕ:10.11.2003
2. ಸರ್ಕಾರದ ಆದೇಶ ಸಂಖ್ಯೆ.ಇಡಿ 285 ಡಿಪಿಐ 2001, ದಿನಾಂಕ:25.1.2004
3. ದಿನಾಂಕ:29.10.2004ರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ.ಸಿ5(9) ಹುಸ್ತ 12/2004-05,

ಪ್ರಸ್ತಾವನೆ:

ಮೇಲೆ (1) ಮತ್ತು (2) ರ ಸರ್ಕಾರದ ಆದೇಶಗಳಲ್ಲಿ ಧಾರವಾಡ ಮತ್ತು ಗುಲ್ಬರ್ಗಾದಲ್ಲಿರುವ ಆಯುಕ್ತಾಲಯಗಳಲ್ಲಿ ಬೋಧಕ ವೃಂದದ ಉಪನಿರ್ದೇಶಕರ ತಲಾ 2 ಹುದ್ದೆಗಳು ಮಂಜೂರಾಗಿದ್ದು, ಈ ಎರಡು ಕಛೇರಿಗಳಲ್ಲಿಯೂ ತಲಾ 2 ಉಪನಿರ್ದೇಶಕರ ಹುದ್ದೆಗಳಲ್ಲಿ ಬೋಧಕ ವೃಂದದ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಓದಲಾದ (3)ರ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಪತ್ರದಲ್ಲಿ ಇಲಾಖೆಯಲ್ಲಿ ಒಟ್ಟು ಬೋಧಕೇತರ ವೃಂದಕ್ಕೆ ಸೇರಿದ ನೌಕರರ ಸಂಖ್ಯೆ 11,525 ಇದ್ದು, ಬೋಧಕೇತರ ವೃಂದದಲ್ಲಿ ಒಟ್ಟು 272 ಅಧಿಕಾರಿಗಳ ಹುದ್ದೆಗಳು ಇವೆ. ಈ ಪೈಕಿ 06 ಹುದ್ದೆಗಳು ಗ್ರೂಪ್-ಎ ಶ್ರೇಣಿಯಲ್ಲಿ ಇರುತ್ತವೆ. ಉಳಿದ 266 ಹುದ್ದೆಗಳು ಗ್ರೂಪ್-ಬಿ ಹುದ್ದೆಗಳಾಗಿರುತ್ತವೆ. ಬೋಧಕೇತರ ವೃಂದಕ್ಕೆ ಕೇವಲ ಒಂದು ಉಪನಿರ್ದೇಶಕರ ಹುದ್ದೆ ಲಭ್ಯವಿದ್ದು, ಆಯುಕ್ತಾಲಯಗಳಲ್ಲಿರುವ ತಲಾ ಎರಡು ಉಪನಿರ್ದೇಶಕರ ಹುದ್ದೆಗಳ ಪೈಕಿ ಒಂದೊಂದು ಉಪನಿರ್ದೇಶಕರ ಹುದ್ದೆಯನ್ನು ಉಪನಿರ್ದೇಶಕರು(ಆಡಳಿತ) ಬೋಧಕೇತರ ಎಂಬುದಾಗಿ ಪರಿವರ್ತಿಸಲು ಹಾಗೂ ಅದೇ ಸ್ಥಳಗಳಲ್ಲಿ ಮುಂದುವರಿಸಿ ಸೂಕ್ತ ಆದೇಶ ಹೊರಡಿಸಲು ಕೋರಿರುತ್ತಾರೆ. ಇದನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

<u>ಸರ್ಕಾರಿ ಆದೇಶ ಸಂಖ್ಯೆ.ಇಡಿ 148 ಡಿಪಿಐ 2005, ಬೆಂಗಳೂರು, ದಿನಾಂಕ:2ನೇ ಏಪ್ರಿಲ್ 2005</u>

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಧಾರವಾಡ ಮತ್ತು ಗುಲ್ಬರ್ಗಾದಲ್ಲಿರುವ ಆಯುಕ್ತಾಲಯಗಳಲ್ಲಿ ಮಂಜೂರಾಗಿರುವ ತಲಾ ಎರಡು ಉಪನಿರ್ದೇಶಕರ ಹುದ್ದೆಗಳ ಪೈಕಿ ಒಂದೊಂದು ಉಪನಿರ್ದೇಶಕರ ಹುದ್ದೆಯನ್ನು ಉಪನಿರ್ದೇಶಕರು (ಆಡಳಿತ) ಬೋಧಕೇತರ ಎಂಬುದಾಗಿ ಪರಿವರ್ತಿಸಿ ಆಯಾ ಸ್ಥಳಗಳಲ್ಲಿ ಅಂದರೆ ಧಾರವಾಡ ಮತ್ತು ಗುಲ್ಬರ್ಗಾ ಆಯುಕ್ತಾಲಯಗಳಲ್ಲಿ ಮುಂದುವರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸ್ವರ್ಣಲತ ಎಂ.ಭಂಡಾರೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ(ಸೇವೆಗಳು-1,2)

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ/ಧಾರವಾಡ

ಸಂಸ್ಥೆಗಳನ್ನು ಡಿ.ಎಸ್.ಇ.ಆರ್.ಟಿ. ಕೂಡ ಶೈಕ್ಷಣಿಕ ಹಾಗೂ
ಆಡಳಿತಾತ್ಮಕ ತಪಾಸಣೆ ನಡೆಸುವುದು,

6. ಈಶಾನ್ಯ ವಲಯದ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಏಳು ಜಿಲ್ಲೆಗಳ ಅಧಿಕಾರಿ ಹಾಗೂ ಸಿಬ್ಬಂದಿಗೆ ಸರ್ಕಾರಿ ಸಾಮಾನ್ಯ ಭವಿಷ್ಯ ನಿಧಿಗೆ ಸಂಬಂಧಿಸಿದಂತೆ ಇಲಾಖಾ ನಿರ್ದೇಶಕರುಗಳಿಗೆ ಇರುವ ಪೂರ್ಣ ಅಧಿಕಾರ

ಈ ಆದೇಶವನ್ನು ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಅನಧಿಕೃತ ಟಿಪ್ಪಣಿ ಸಂಖ್ಯೆ:ಇಡಿ 382 [illegible] 2002, ದಿನಾಂಕ: 8.5.2002ರಲ್ಲಿ ನೀಡಿದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ರಾಜ್ಯ ಯೋಜನಾ ನಿರ್ದೇಶಕರು, ಡಿ.ಪಿ.ಇ.ಪಿ. ನಂಬರ್ 8, ಕನ್ನಿಂಗ್‌ಹ್ಯಾಂ ರಸ್ತೆ, ಮಾರ್ಕೆಟಿಂಗ್ ಫೆಡರೇಶನ್ ಕಟ್ಟಡ, ಬೆಂಗಳೂರು -1
4. ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೀದರ್ :: ಗುಲ್ಬರ್ಗಾ:: ರಾಯಚೂರು:: ಕೊಪ್ಪಳ :: ಬಿಜಾಪುರ:: ಬಳ್ಳಾರಿ:: ಬಾಗಲಕೋಟೆ ಜಿಲ್ಲೆ
5. ನಿರ್ದೇಶಕರು, ಈಶಾನ್ಯ ವಲಯದ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯ, ಗುಲ್ಬರ್ಗಾ
6. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಬಸವನಗುಡಿ, ಬೆಂಗಳೂರು -4
7. ವಿಭಾಗೀಯ ಕಾರ್ಯದರ್ಶಿ, ಕ.ಪ್ರಾ.ಶಿ.ಪರೀಕ್ಷಾ ಮಂಡಳಿ ಹಾಗೂ ಪದನಿಮಿತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಿಭಾಗ:: ಮೈಸೂರು ವಿಭಾಗ:: ಬೆಳಗಾವಿ ವಿಭಾಗ :: ಗುಲ್ಬರ್ಗಾ ವಿಭಾಗ
8. ಪ್ರಾಥಮಿಕ ಹಾಗು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು
9. ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇವರ ಆಪ್ತ ಕಾರ್ಯದರ್ಶಿಗಳು
10. ಸರ್ಕಾರದ ಉಪಕಾರ್ಯದರ್ಶಿ - 3 ಶಿಕ್ಷಣ ಇಲಾಖೆ ರವರ ಆಪ್ತ ಸಹಾಯಕರು
11. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು

ಡಿಸಿರಾ)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಈಶಾನ್ಯವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯ, ಗುಲ್ಬರ್ಗಾ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಡಯಟ್ ಗಳಿಗೆ ಸಂಬಂಧಿಸಿದಂತೆ ಕೆಲವು ವಿಷಯಗಳ ಅನುಮತಿ ನೀಡುವ ಅಧಿಕಾರವನ್ನು ಸದರಿ ನಿರ್ದೇಶನಾಲಯಕ್ಕೆ ಪ್ರತ್ಯಾಯೋಜಿಸುವ ಬಗ್ಗೆ

ಓದಲಾಗಿದೆ 1) ಆದೇಶ ಸಂಖ್ಯೆ: ಇಡಿ 285 ಡಿಜಿಒ 2001 ದಿನಾಂಕ: 16-6-2001
2) ಆದೇಶ ಸಂಖ್ಯೆ: ಇಡಿ 285 ಡಿಜಿಒ 2001 ದಿನಾಂಕ: 25-1-2002
3) ಸಾರ್ವಜನಿಕ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ: ಸಿ1(1) ಇತರೆ – 11 2001, ದಿನಾಂಕ: 19.12.2001

ಪ್ರಸ್ತಾವನೆ :-

ಓದಲಾದ (1) ಮತ್ತು (2)ರ ಸರ್ಕಾರದ ಆದೇಶದಲ್ಲಿ ಈಶಾನ್ಯವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯ, ಗುಲ್ಬರ್ಗಾ ಎಂದು ಹೊಸ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದೆ. ಓದಲಾದ (3) ರ ಪತ್ರದಲ್ಲಿ ಈಶಾನ್ಯವಲಯ ಶಿಕ್ಷಣಾಭಿವೃದ್ಧಿ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (ಸಿ.ಟಿ.ಇ) ಮತ್ತು ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ, (ಡಯಟ್) ಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನ ಮತ್ತು ತರಬೇತಿ ನಿರ್ದೇಶನಾಲಯದಲ್ಲಿ ಅನುಮತಿ ಹಾಗೂ ಅನುಮೋದನೆ ಪಡೆಯುವಲ್ಲಿ ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಹಾಗೂ ಈ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ನೆರವಾಗಲು ಕೆಲವು ಅಧಿಕಾರಗಳನ್ನು ಈಶಾನ್ಯವಲಯ ಶಿಕ್ಷಣಾಭಿವೃದ್ಧಿ ನಿರ್ದೇಶಕರಿಗೆ ವಹಿಸಿಕೊಡುವುದು ಸೂಕ್ತವೆಂದು ಈ ಬಗ್ಗೆ ಆದೇಶ ನೀಡುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಪ್ರಸ್ತಾವನೆ ಸಲ್ಲಿಸಿರುವ, ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 285 ಡಿಜಿಒ 2001, ಬೆಂಗಳೂರು, ದಿನಾಂಕ: 8ನೇ ಮೇ 2002

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈಶಾನ್ಯವಲಯ ವ್ಯಾಪ್ತಿಯಲ್ಲಿ ಬರುವ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (ಸಿ.ಟಿ.ಇ) ಮತ್ತು ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ (ಡಯಟ್) ಈ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಹಾಗೂ ಈಶಾನ್ಯ ವಲಯ ಶಿಕ್ಷಣಾಭಿವೃದ್ಧಿ ನಿರ್ದೇಶಕರಿಗೆ ಈ ಕೆಳಕಂಡ ಅಧಿಕಾರವನ್ನು ಚಲಾಯಿಸಲು ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಿದೆ.

1. ಈಶಾನ್ಯವಲಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಜಿಲ್ಲೆಗಳಲ್ಲಿನ ಸಿ.ಟಿ.ಇ. ಮತ್ತು ಡಯಟ್ ಪ್ರಾಂಶುಪಾಲರ ಪ್ರವಾಸಸೂಚಿ ಹಾಗೂ ದಿನಚರಿಗಳಿಗೆ ಅನುಮೋದನೆ ನೀಡುವುದು
2. ಈ ಮೇಲಿನ ಎಲ್ಲಾ ಸಂಸ್ಥೆಗಳ ಪ್ರಾಂಶುಪಾಲರ ಹಾಗೂ ಸಿಬ್ಬಂದಿ ವರ್ಗದ ಪ್ರವಾಸ ಬಿಲ್ಲುಗಳ ಮೇಲು ರುಜು ಮಾಡುವುದು
3. ಈ ಸಂಸ್ಥೆಗಳ ಅಧಿಕಾರಿ ಹಾಗೂ ಸಿಬ್ಬಂದಿಗೆ ನಿಯಮಾವಳಿಯಂತೆ ರಜೆ ಮಂಜೂರಾತಿ ನೀಡುವುದು
4. ಈ ಸಂಸ್ಥೆಗಳ ಎಲ್ಲಾ ಡಿ.ಸಿ. ಬಿಲ್ಲುಗಳ ಮೇಲು ರುಜು ಮಾಡುವುದು

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಬೋಧಕೇತರ ವೃಂದದ ಗ್ರೂಪ್-'ಸಿ' ಹುದ್ದೆಗಳನ್ನು ಹೊಸದಾಗಿ ಸೃಜಿಸುವ ಬಗ್ಗೆ.

ಓದಲಾಗಿದೆ:- 1) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:13/10/2011 ರಂದು ನಡೆದ ಸಭೆ.

2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪ್ರಸ್ತಾವನೆ ಸಂಖ್ಯೆ:ಸಿ5(1)ನೌ.ಸಂಘದ ಬೇಡಿಕೆ 43/2011-12. ದಿನಾಂಕ:10/12/2013.

**ಪ್ರಸ್ತಾವನೆ :**

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ, ಮೇಲೆ ಓದಲಾದ ಕ್ರಮ ಸಂಖ್ಯೆ:(1)ರ ದಿನಾಂಕ:13/10/2011 ರ ಸಭಾ ನಡವಳಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಬೋಧಕೇತರ ವೃಂದದ ಗ್ರೂಪ್-'ಸಿ' ಹುದ್ದೆಗಳನ್ನು ಹೊಸದಾಗಿ ಸೃಜಿಸುವ ಕುರಿತಂತೆ ಈ ಕೆಳಕಂಡ ಅಂಶಗಳ ಬಗ್ಗೆ ಚರ್ಚಿಸಲಾಯಿತು.

- ಶಿಕ್ಷಣ ಇಲಾಖೆಯಲ್ಲಿ ನೇರ ನೇಮಕಾತಿಗೆ ಇರುವಂತೆ ಲಿಪಿಕ ನೌಕರರ ನೇಮಕಾತಿಯನ್ನು ಸಹ ಎಸ್.ಎಲ್.ಆರ್.ಸಿ (ರಾಜ್ಯ ಮಟ್ಟದ ನೇಮಕಾತಿ ಪ್ರಾಧಿಕಾರ) ಮೂಲಕ ತುಂಬುವ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಹಾಗೂ ಇನ್ನು ಮುಂದೆ ಶಿಕ್ಷಕರುಗಳನ್ನು ನೇಮಕ ಮಾಡುವಾಗ ಪ್ರತಿ 99 ಶಿಕ್ಷಕರಿಗೆ ಒಂದು ಪ್ರಥಮ ದರ್ಜೆ ಸಹಾಯಕರ ಹುದ್ದೆಯನ್ನು ಸೃಜಿಸಿ, ನೇಮಕ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸಲು ಮಾನ್ಯ ಸಚಿವರು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಸೂಚಿಸಿದರು.
- ಆರ್.ಎಂ.ಎಸ್.ಎ ನಲ್ಲಿ ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಿ ಪ್ರಸ್ತಾವನೆ ಮಂಡಿಸುವಂತೆ ಸೂಚಿಸಲಾಯಿತು.
- ಮಧ್ಯಾಹ್ನ ಉಪಹಾರ ಯೋಜನೆಯ ಮೇಲ್ವಿಚಾರಣೆ ಬಗ್ಗೆ ಬೋಧಕ ಸಿಬ್ಬಂದಿಗೆ ಸಹಾಯಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಇದರಿಂದ ಮಕ್ಕಳ ಪಾಠ ಪ್ರವಚನೆಗಳಿಗೆ ತೊಂದರೆಯಾಗುತ್ತಿದ್ದು, ಈ ಹುದ್ದೆಯನ್ನು ಬೋಧಕೇತರ ಸಿಬ್ಬಂದಿಗೆ ವಹಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು. ಅಕ್ಷರ ದಾಸೋಹ ಕೆಲಸವನ್ನು ಪ್ರತ್ಯೇಕವಾಗಿ ಬೋಧಕೇತರ ಸಿಬ್ಬಂದಿಗೆ ವಹಿಸಲು ಮಾನ್ಯ ಸಚಿವರು ತಿಳಿಸಿದರು.
- ಆರ್.ಎಂ.ಎಸ್.ಎ ಯೋಜನೆ ಅಡಿಯಲ್ಲಿ 39 ಹೆಚ್ಚುವರಿ ಬಿ.ಇ.ಓ ಹಾಗೂ ಇತರೆ ಹುದ್ದೆಗಳ ಸೃಜನೆಯಾಗಿದ್ದು, ಲಿಪಿಕ ವೃಂದದ ಹುದ್ದೆಗಳು ಸಮಾನಾಂತರವಾಗಿ ಸೃಜನೆ ಆಗಿಲ್ಲ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕೇತರ ವೃಂದದ ಹುದ್ದೆಗಳನ್ನು ಹೊಸದಾಗಿ ಸೃಜಿಸುವ ಕುರಿತಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಂದ ವರದಿಯನ್ನು ಕೋರಲಾಗಿತ್ತು. ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಈ ಕೆಳಕಂಡಂತೆ ವರದಿ ಸಲ್ಲಿಸಿರುತ್ತಾರೆ.

- ಮದ್ಯಾಹ್ನ ಉಪಹಾರ ಯೋಜನೆ ಮತ್ತು ಕ್ಷೀರ ಯೋಜನೆಗಳಂತಹ ಮಹತ್ವದ ಯೋಜನೆಗಳು ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾಗಿದ್ದು, ಅವುಗಳ ಯಶಸ್ವಿ ಅನುಷ್ಠಾನಕ್ಕೆ ಸಿಬ್ಬಂದಿಯ ಅಗತ್ಯವಿದ್ದು, ಈ ಯೋಜನೆಗಳ ಕಾರ್ಯಾನುಷ್ಠಾನದ ಉಸ್ತುವರಿಗಾಗಿ ಸಂಬಂಧಿಸಿದ ಉಪ ನಿರ್ದೇಶಕರ / ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಪ್ರತ್ಯೇಕವಾಗಿ ಒಂದು ಅಧೀಕ್ಷಕರ ಹುದ್ದೆ ಮತ್ತು ಒಂದು ಪ್ರಥಮ ದರ್ಜೆ ಸಹಾಯಕರ ಹುದ್ದೆ ಹಾಗೂ ಒಂದು ಗ್ರೂಪ್-'ಡಿ' ನೌಕರರ ಹುದ್ದೆ ಮಂಜೂರು ಮಾಡುವುದು ಸೂಕ್ತವಾಗಿರುತ್ತದೆ.

- ಶಾಲೆಗಳಲ್ಲಿನ ಬಿಸಿಯೂಟ ಮತ್ತು ಕ್ಷೀರ ಯೋಜನೆಗಳು ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾಗಿದ್ದು, ಅವುಗಳ ಯಶಸ್ವಿ ಅನುಷ್ಠಾನಕ್ಕೆ ಸಿಬ್ಬಂದಿಯ ಅಗತ್ಯವಿದ್ದು, ಈ ಯೋಜನೆಗಳ ಕಾರ್ಯಾನುಷ್ಠಾನದ ಉಸ್ತುವಾರಿಕೆಯ ಸಂಬಂಧಿಸಿದ ಜವಾಬ್ದಾರಿಯನ್ನು ಬೋಧಕೇತರ ಸಿಬ್ಬಂದಿಗೆ ನೀಡುವುದರಿಂದ ಶಿಕ್ಷಕರು ಶೈಕ್ಷಣಿಕ ಚಟುವಟಿಕೆಗಳಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ಅನುಕೂಲವಾಗುತ್ತದೆ. ಆದ್ದರಿಂದ, ಈ ಎರಡು ಯೋಜನೆಗಳು ಇರುವ ಪ್ರತಿ ಶಾಲೆಗೆ ಒಂದು ಪ್ರಥಮ ದರ್ಜೆ ಸಹಾಯಕರ ಹುದ್ದೆ ಮಂಜೂರು ಮಾಡುವುದು ಸೂಕ್ತವಾಗಿದೆ.

- ಮಧ್ಯಾಹ್ನ ಉಪಹಾರ ಯೋಜನೆಗೆ ಸಂಬಂಧಿಸಿದಂತೆ ಪ್ರತಿ ತಾಲ್ಲೂಕಿನಲ್ಲಿ ಗ್ರೂಪ್-ಬಿ ವೃಂದದ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಹುದ್ದೆಗಳಿಗೆ ಅವರ ಬದಲಾಗಿ ಗ್ರೂಪ್-ಬಿ ವೃಂದದ ಬೋಧಕೇತರರನ್ನು ನೇಮಿಸಿದರೆ ಬೋಧಕ ವೃಂದದ ಅಧಿಕಾರಿಗಳ ಸೇವೆಯನ್ನು ಶೈಕ್ಷಣಿಕ ಚಟುವಟಿಗಳಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದಲ್ಲದೆ ಇಲಾಖೆಯಲ್ಲಿ ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದಂತಾಗುತ್ತದೆ. ಅಲ್ಲದೆ ಬೋಧಕೇತರ ವೃಂದದ ಅಧಿಕಾರಿಗಳ ಸೇವೆಯನ್ನು ಆಡಳಿತಾತ್ಮಕ ಕಾರ್ಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಳಸಿ ಅವರಿಗೆ ಜವಾಬ್ದಾರಿಯನ್ನು ನಿಗದಿಪಡಿಸಬಹುದಾಗಿದೆ. ಈ ಕಾರ್ಯವು ಆಡಳಿತಾತ್ಮಕ ಕಾರ್ಯವಾಗಿದ್ದು, ಇದರಲ್ಲಿ ಹಣಕಾಸಿನ ಹೊರೆ ಬೀಳುವುದಿಲ್ಲವೆಂದು ವರದಿ ಮಾಡಿರುತ್ತಾರೆ.

- ಪ್ರತಿ ವರ್ಷವು ಸಾವಿರಾರು ಶಿಕ್ಷಕರ ಹುದ್ದೆ ಮಂಜೂರಾಗುತ್ತಿದ್ದು, ಇಲಾಖೆ ಆರಂಭವಾದಾಗಿನಿಂದ ಇರುವ ಸಿಬ್ಬಂದಿ ಕಾರ್ಯ ಹಂಚಿಕೆಯ Staffing Pattern ಈಗಲೂ ಚಾಲ್ತಿಯಲ್ಲಿದೆ. ತಾಲ್ಲೂಕುಗಳಲ್ಲಿ ಸರ್ಕಾರಿ, ಅನುದಾನಿತ, ಅನುದಾನರಹಿತ ವಲಯದಲ್ಲಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಸಂಖ್ಯೆಯು 4-5 ಪಟ್ಟು ಜಾಸ್ತಿಯಾಗಿದ್ದರೂ, ಸಕಾಲ ಯೋಜನೆಯು ಸೇರಿದಂತೆ ಹತ್ತಾರು ಕಾಲಮಿತಿ ಯೋಜನೆಗಳು ಜಾರಿಯಾಗುತ್ತಿದ್ದರೂ ಸಹ ಸಿಬ್ಬಂದಿ ಸಂಖ್ಯೆಯಲ್ಲಿ ಯಾವುದೇ ಹೆಚ್ಚಳವಾಗಿರುವುದಿಲ್ಲ. ಇದರಿಂದಾಗಿ ಹಾಲಿ ಇರುವ ಸಿಬ್ಬಂದಿಯ ಮೇಲೆ ಕಾರ್ಯಭಾರದ ಒತ್ತಡ ಹೆಚ್ಚಾಗಿದೆ. ಸುಗಮ ಆಡಳಿತದ ದೃಷ್ಟಿಯಿಂದ 100 ಮಂದಿ ಶಿಕ್ಷಕರಿಗೆ ಒಂದು ಪ್ರಥಮ ದರ್ಜೆ ಸಹಾಯಕರ ಹುದ್ದೆ, 150 ಶಿಕ್ಷಕರಿಗೆ ಒಂದು ದ್ವಿತೀಯ ದರ್ಜೆ ಸಹಾಯಕರ ಹುದ್ದೆ (ಅಂದರೆ, 150 ಮಂದಿ ಶಿಕ್ಷಕರಿಗೆ ಒಂದು ಪ್ರಥಮ ದರ್ಜೆ ಸಹಾಯಕರ ಹುದ್ದೆ ಮತ್ತು ಒಂದು ದ್ವಿತೀಯ ದರ್ಜೆ ಸಹಾಯಕರ ಹುದ್ದೆ ಹಾಗೂ ಒಂದು ಕಂಪ್ಯೂಟರ್ ಅಸಿಸ್ಟೆಂಟ್ ಹುದ್ದೆ) ಈ ಅನುಪಾತದಲ್ಲಿ ಬಿ.ಇ.ಓ ಕಛೇರಿ ಮತ್ತು ಡಿ.ಡಿ.ಪಿ.ಐ ಕಛೇರಿಗಳಿಗೆ ಹುದ್ದೆಗಳನ್ನು ಮಂಜೂರು ಮಾಡಿದಲ್ಲಿ ಸುಗಮ ಆಡಳಿತ ನಿರ್ವಹಣೆಗೆ ಅನುಕೂಲವಾಗುತ್ತದೆ ಎಂದು ವರದಿ ಮಾಡಿಯುತ್ತಾರೆ.
- ಪ್ರಸ್ತುತ ಕೇಂದ್ರ ಹಾಗೂ ರಾಜ್ಯ ವಲಯದ ಹತ್ತು ಹಲವು ಯೋಜನೆಗಳು ಜಾರಿಯಲ್ಲಿದ್ದು, ಅವುಗಳ ಸಮರ್ಪಕ ಲೆಕ್ಕಪತ್ರ ನಿರ್ವಹಣೆ ದೃಷ್ಟಿಯಿಂದ ಇಲಾಖೆಯ ಜಿಲ್ಲಾ ಮಟ್ಟದ ಕಛೇರಿ, ವಿಭಾಗ ಮಟ್ಟದ ಕಛೇರಿ ಹಾಗೂ ರಾಜ್ಯ ಮಟ್ಟದ ಕಛೇರಿಗಳಲ್ಲಿ ತಲಾ ಒಂದೊಂದು ಲೆಕ್ಕಾಧಿಕಾರಿಗಳ ಹುದ್ದೆಗಳು ಅಗತ್ಯವಾಗಿರುತ್ತದೆ. ಈ ಹುದ್ದೆಗಳನ್ನು ಜೇಷ್ಠತೆಯಲ್ಲಿ ಹಿರಿಯರಗಿರುವ ಅರ್ಹ ನೌಕರರಿಗೆ ಬಡ್ತಿ ನೀಡುವ ಮೂಲಕ ತುಂಬುವುದರಿಂದ ಒಂದು ವಾರ್ಷಿಕ ವೇತನ ಬಡ್ತಿಯ ಹೊರತಾಗಿ ಹೆಚ್ಚಿನ ಆರ್ಥಿಕ ಹೊರೆ ಇರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಸಮಗ್ರ ಶೈಕ್ಷಣಿಕ ಪ್ರಗತಿಯ ಹಾಗೂ ಸುಗಮ ಆಡಳಿತ ವ್ಯವಸ್ಥೆಯನ್ನು ಬಲಪಡಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಯ, ಆಡಳಿತ ಕಛೇರಿಗಳಲ್ಲಿ ಅಕೌಂಟ್ಸ್ ಅಧೀಕ್ಷಕರು, ಅಕೌಂಟ್ಸ್ ಪ್ರಥಮ ದರ್ಜೆ ಸಹಾಯಕರು, ಪ್ರಥಮ ದರ್ಜೆ ಸಹಾಯಕರು ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ಸೃಜಿಸುವುದು ಸೂಕ್ತವೆಂದು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಇಡಿ 36 ಮಾಹಿತಿ 2014, ಬೆಂಗಳೂರು, ದಿನಾಂಕ: 26/08/2015</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸಾರ್ವಜನಿಕ ಶಿಕ್ಷಣ ಇಲಾಖೆಯ, ಈ ಕೆಳಕಂಡ ಬೋಧಕೇತರ ವೃಂದದ ಹುದ್ದೆಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ, ಆಡಳಿತ ಕಛೇರಿಗಳಲ್ಲಿ ಅಕೌಂಟ್ ಅಧೀಕ್ಷಕರು, ಅಕೌಂಟ್ ಪ್ರಥಮ ದರ್ಜೆ ಸಹಾಯಕರು, ಪ್ರಥಮ ದರ್ಜೆ ಸಹಾಯಕರು ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ಈ ತಕ್ಷಣದಿಂದ ಜಾರಿಗೆ

ಬರುವಂತೆ ಸೃಜಿಸಿ, ಸದರಿ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮದಂತೆ ಭರ್ತಿ ಮಾಡಲು ಆದೇಶಿಸಿದೆ.

| ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಒಟ್ಟು | ಹುದ್ದೆ ತುಂಬುವ ವಿಧಾನ |
|---|---|---|---|
| ಉಪ ನಿರ್ದೇಶಕರ ಕಛೇರಿ | | | |
| ಅಕೌಂಟ್ಸ್ ಅಧೀಕ್ಷಕರು | 01 x 34 | 34 | ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ನಿಯೋಜನೆ. |
| ಪ್ರಥಮ ದರ್ಜೆ ಸಹಾಯಕರು | 01 x 34 | 34 | |
| ಒಟ್ಟು | | 68 | |
| ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ | | | |
| ಅಧೀಕ್ಷಕರು | 01 x 204 | 204 | |
| ಅಕೌಂಟ್ಸ್ ಪ್ರಥಮ ದರ್ಜೆ ಸಹಾಯಕರು | 01 x 204 | 204 | ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ನಿಯೋಜನೆ. |
| ದ್ವಿತೀಯ ದರ್ಜೆ ಸಹಾಯಕರು | 01 x 204 | 204 | |
| ಒಟ್ಟು | | 612 | |
| ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) | | | |
| ಅಕೌಂಟ್ಸ್ ಅಧೀಕ್ಷಕರು | 01 x 30 | 30 | ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ನಿಯೋಜನೆ. |
| ಒಟ್ಟು | | 30 | |
| ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (ಸಿಟಿಇ) (ಬಿ.ಇಡಿ. ಕಾಲೇಜು) | | | |
| ಅಕೌಂಟ್ಸ್ ಅಧೀಕ್ಷಕರು | 01 x 06 | 06 | ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ನಿಯೋಜನೆ. |
| ಒಟ್ಟು | | 06 | |
| ಒಟ್ಟು | | 716 | |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಎಫ್‌ಡಿ 839 ವೆಚ್ಚ-8/2014 ದಿನಾಂಕ:09/07/2015 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಐ.ಎಫ್. ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಯೋಜನೆ)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ

ಇವರಿಗೆ:-
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ 500 ಪ್ರತಿಗಳನ್ನು ಒದಗಿಸುವಂತೆ ಕೋರಿದೆ.